ವಿಜಯಪುರ | ಸಂಪುಟ 04 | ಸಂಚಿಕೆ 196 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily


ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ರವಿವಾರ, ಸೆಪ್ಟೆಂಬರ್, 27, 2026



"ಜ್ಞಾನೇಶ್ ಕುಮಾರ್ ಅವರು ಒಬ್ಬ ದಲಿತ ಐಎಎಸ್ ಅಧಿಕಾರಿ ಎಂಬ ಕಾರಣಕ್ಕೆ ಕಾಂಗ್ರೆಸ್ ಅವರನ್ನು ಸಹಿಸಿಕೊಳ್ಳಲಾಗದೇ ಸಂವಿಧಾನಿಕ ಹುದ್ದೆಗೆ ಅವಮಾನ ಮಾಡಿ, ಕೆಳಗಿಳಿಸಲು ಹುನ್ನಾರ ನಡೆಸಿದೆ. ಈ ದೇಶದ ದಲಿತರು, ಅಲ್ಪ ಸಂಖ್ಯಾತರು ದಲಿತ ಅಧಿಕಾರಿ ಜ್ಞಾನೇಶ್ ಕುಮಾರ್ ಬೆನ್ನಿಗೆ ನಿಲ್ಲಬೇಕು."

■ ಗೋವಿಂದ ಕಾರಜೋಳ
ಚಿತ್ರದುರ್ಗ ಸಂಸದರು

### ಲೋಕ್ ಅದಾಲತ್ ನಲ್ಲಿ 605 ಪ್ರಕರಣಗಳ ಇತ್ಯರ್ಥ । ಹಿರಿಯ ಸಿವಿಲ್ ನ್ಯಾಯಾಧೀಶ ರವೀಂದ್ರಕುಮಾರ ಕಟ್ಟಿಮನಿ ಪಕ್ಷಗಾರರಿಗೆ ಕರೆ

# ಕೋರ್ಟ್ ಗೆ ಅಲೆದಾಡಿ ನೆಮ್ಮದಿ ಕಳೆದುಕೊಳ್ಳಬೇಡಿ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ವರ್ಷಗಟ್ಟಲೆ ನ್ಯಾಯಾಲಯಕ್ಕೆ ಅಲೆದಾಡಿ ಹಣ, ಸಮಯ ಮತ್ತು ಮಾನಸಿಕ ನೆಮ್ಮದಿ ಹಾಳುಮಾಡಿಕೊಳ್ಳುವ ಬದಲು, ಲೋಕ್ ಅದಾಲತ್ ಮೂಲಕ ಸೌಹಾರ್ದಯುತವಾಗಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವಂತೆ ಹಿರಿಯ ಸಿವಿಲ್ ನ್ಯಾಯಾಧೀಶರಾದ ರವೀಂದ್ರಕುಮಾರ ಕಟ್ಟಿಮನಿ ಅವರು ಪಕ್ಷಗಾರರಿಗೆ ಕರೆ ನೀಡಿದರು.

ಪಟ್ಟಣದ ನ್ಯಾಯಾಲಯಗಳ ಸಂಕೀರ್ಣದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಲೋಕ್ ಅದಾಲತ್ ನಲ್ಲಿ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿ ಅವರು ಮಾತನಾಡಿದರು.

ಸಾಮಾನ್ಯ ನ್ಯಾಯಾಲಯಗಳಲ್ಲಿ ವಾದ-ಪ್ರತಿವಾದ ನಡೆದು ಒಬ್ಬ-ರಿಗೆ ಗೆಲುವಾದರೆ ಮತ್ತೊಬ್ಬರಿಗೆ ಸೋಲಾಗುತ್ತದೆ. ಇದರಿಂದ ದ್ವೇಷ ಮತ್ತಷ್ಟು ಬೆಳೆಯುತ್ತದೆ. ಆದರೆ ಲೋಕ್ ಅದಾಲತ್ ರಾಜಿ-ಸಂಧಾನದ ವೇದಿಕೆಯಾಗಿದ್ದು, ಇಲ್ಲಿ ಯಾರೂ ಸೋಲುವುದಿಲ್ಲ. ಉಭಯ ಪಕ್ಷಕಾರರಿಗೂ ಜಯ ಸಿಗುತ್ತದೆ, ಮತ್ತು ಸಂಬಂಧಗಳು ಇನ್ನಷ್ಟು ಗಟ್ಟಿಯಾಗುತ್ತವೆ. ಹಾಗಾಗಿ ಲೋಕ್ ಅದಾಲತ್ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡು ನೆಮ್ಮದಿಯ ಜೀವನ ಸಾಗಿಸುವತ್ತ ಪಕ್ಷಗಾರರು ಮುಂದಾಗಬೇಕು ಎಂದರು.

ಕಾನೂನು ಸೇವಾ ಸಮಿತಿಯ ಸದಸ್ಯಕಾರ್ಯದರ್ಶಿಗಳೂಹಾಗೂಸಿವಿಲ್ ನ್ಯಾಯಾಧೀಶರಾದ ರಾಮಮೂರ್ತಿ ಎನ್ ಅವರು ಮಾತನಾಡಿ, ಸಣ್ಣಪುಟ್ಟ ಆಸ್ತಿ ತಕರಾರು, ಕೌಟುಂಬಿಕ ಮನಸ್ತಾಪ ಅಥವಾ ಹಣಕಾಸಿನ ವಿವಾದಗಳಿಗೆ ಹಠ ಹಿಡಿದು ವರ್ಷಗಟ್ಟಲೆ ಕೋರ್ಟ್ ಮೆಟ್ಟಿಲು ಹತ್ತಿ ಇಳಿಯುವುದು ಜಾಣ-ತನವಲ್ಲ. ತೀರ್ಪು ಬರುವ ಹೊತ್ತಿಗೆ ಇಡೀ ಜೀವನವೇ ಮುಗಿದುಹೋಗಿರುತ್ತದೆ. ಅಹಂಕಾರ ಮತ್ತು ಪ್ರತಿಷ್ಠೆಯನ್ನು ಬದಿಗಿಟ್ಟು ಮುಕ್ತ ಮನಸ್ಸಿನಿಂದ ಲೋಕ್ ಅದಾಲತ್‌ಗೆ ಬನ್ನಿ. ಇಲ್ಲಿ ನೀಡುವ ತೀರ್ಪಿಗೆ ಯಾವುದೇ ಮೇಲ್ಮನವಿ ಇರುವುದಿಲ್ಲವಾದ್ದರಿಂದ ನಿಮ್ಮ ವ್ಯಾಜ್ಯಕ್ಕೆ ಶಾಶ್ವತ ಪೂರ್ಣವಿರಾಮ ಬೀಳುತ್ತದೆ. ಸಾರ್ವಜನಿಕರು ಹಾಗೂ ವಕೀಲ ಮಿತ್ರರು ಈ ಜನಸ್ನೇಹಿ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು. ಲೋಕ ಅದಾಲತ್ ನಲ್ಲಿ ಎರಡು ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ಒಟ್ಟು 7045 ಬಾಕಿ ಇರುವ ಪ್ರಕರಣಗಳ ಪೈಕಿ 1300 ಪ್ರಕರಣಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಅವುಗಳಲ್ಲಿ ಒಟ್ಟು 605 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ. ಸಂಧಾನಕಾರರಾಗಿ ಆರ್.ಬಿ.ಕುಲಕರ್ಣಿ ಮತ್ತು ಎನ್.ಬಿ.ಮುದ್ನಾಳ ವಕೀಲರುಗಳು ಭಾಗಿಯಾದರೆ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಶಶಿಕಾಂತ ಮಾಲಗತ್ತಿ, ಹಿರಿಯ ನ್ಯಾಯವಾದಿಗಳಾದ ವಿ.ಎಂ.ನಾಗಠಾಣ, ಜೆ.ಎ.ಚಿನಿವಾರ, ಎಂ.ಎ.ಮುದ್ದೇಬಿಹಾಳ, ಎಸ್.ಎಂ.ಗುಡದಿನ್ನಿ, ಎಂ.ಎಚ್.ಕ್ವಾರಿ, ಎನ್.ಜಿ.ಕುಲಕರ್ಣಿ, ಎಸ್.ಆರ್.ಸಜ್ಜನ, ನ್ಯಾಯವಾದಿಗಳಾದ ಎಸ್.ಎಂ.ಕಿಣಗಿ, ಎನ್.ಐ.ಕೇಸಾಪೂರ, ಚೇತನ ಶಿವಶಿಂಪಿ ಸೇರಿದಂತೆ ಎಲ್ಲ ನ್ಯಾಯವಾದಿಗಳು ಲೋಕ್ ಅದಾಲತ್ ಯಶಸ್ವಿಗೆ ಶ್ರಮಿಸಿದರು.

### ಟಾರ್ಗೆಟ್ 180 ಫಿಕ್ಸ್ । ಮುಖ್ಯಮಂತ್ರಿ ಯಾರು ಅನ್ನೋದನ್ನು ಹೈಕಮಾಂಡ್ ನಿರ್ಧರಿಸುತ್ತೆ । ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರೋದು ನಿಶ್ಚಿತ

# ಎಚ್ಡಿಕೆ ನನ್ನ ಮಧ್ಯೆ ಸಿಎಂ ರೇಸ್ ಸೃಷ್ಟಿಸಬೇಡಿ :ವಿಜಯೇಂದ್ರ




ಬೆಂಗಳೂರು: ಕೇಂದ್ರ ಸಚಿವ ಹಾಗೂ ಜೆಡಿ-ಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಹಾಗೂ ನನ್ನ ಮಧ್ಯೆ ಮುಖ್ಯಮಂತ್ರಿ ರೇಸ್ ಸೃಷ್ಟಿಸಬೇಡಿ. ಮುಖ್ಯಮಂತ್ರಿ ಯಾರು ಅನ್ನೋದನ್ನ ಹೈಕಮಾಂಡ್ ನಿರ್ಧರಿಸುತ್ತೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ಶನಿವಾರ ಪಕ್ಷದ ಕಾರ್ಯಕರ್ತರಿಗೆ ಹೇಳಿದ್ದಾರೆ.

ಶನಿವಾರ ಬೆಂಗಳೂರಿನ ಖಾಸಗಿ ಹೋಟೇಲಿನಲ್ಲಿ, ನಾಲ್ಕು ವಿಧಾನ ಪರಿಷತ್ ಸ್ಥಾನಗಳಿಗೆ ಅಕ್ಟೋಬರ್ 23 ರಂದು ನಡೆಯಲಿರುವ ಚುನಾವಣೆ ಕುರಿತು ಚರ್ಚಿಸಲು ಬಿಜೆಪಿ ಮತ್ತು ಜೆಡಿಎಸ್ ಸಮನ್ವಯ ಸಮಿತಿ ಕರೆಯಲಾಗಿತ್ತು.

ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ವಿಜಯೇಂದ್ರ ಅವರು, ಮುಂಬರುವ ಬಿಜೆಪಿ-ಜೆಡಿ-ಎಸ್ ಸರ್ಕಾರ ರಚಿಸುವ ಚರ್ಚೆಯ ಜೊತೆಗೆ ಮುಂದಿನ ಸಿಎಂ ಬಗ್ಗೆಯೂ ಚರ್ಚಿಸಲಾಗಿದೆ. ಮುಂದಿನ ಸಿಎಂ ಯಾರು ಅಂತ ಹೈಕಮಾಂಡ್ ನಿರ್ಧಾರ ಮಾಡಲಿದೆ. ಇದರ ಬಗ್ಗೆ ಮುಖಂಡರು, ಕಾರ್ಯಕರ್ತರು ಬಹಿರಂಗ ಚರ್ಚೆ ನಡೆಸಬಾರದು. ಕುಮಾರಸ್ವಾಮಿ-ವಿಜಯೇಂದ್ರ ಪರ ರೇಸ್ ಸೃಷ್ಟಿಸಬಾರದು. ಯಾವುದೇ, ಘೋಷಣೆ ಮಾಡಬಾರದು ಎಂದು ಸೂಚಿಸಿದರು.

ಕಾರ್ಯಕರ್ತರಿಗೆ ಇದರ ಬಗ್ಗೆ ಗೊಂದಲ ಬೇಡ. ಎನ್‌ಡಿಎ ಸರ್ಕಾರ (ಓಆಂ ಉಠತಣ) ಅಧಿಕಾರಕ್ಕೆ ಬರೋದು ನಿಶ್ಚಿತ. ಸಿಎಂ ಯಾರಾಗಬೇಕು ಅಂತ ಹೈಕಮಾಂಡ್ ನಿರ್ಧ-ರಿಸಲಿದೆ ಎಂದು ಹೇಳಿದರು.

ಇದೇ ವೇಳೆ ಮಾತವಾಡಿದ ಕುಮಾರಸ್ವಾಮಿ ಅವರು, ಮುಂದಿನ ಎಲ್ಲ ಚುನಾವಣೆಗಳನ್ನೂ ಎನ್‌ಡಿಎ ಮೈತ್ರಿಯಡಿ ಒಗ್ಗಟ್ಟಿನಿಂದ ಎದುರಿಸಬೇಕು. ಬಿಹಾರ ಮಾದರಿಯಲ್ಲಿ ಮುಂದಿನ ಚುನಾವಣೆ ನಡೆಸಬೇಕು. ರಾಜ್ಯದಲ್ಲಿ ನಾವು 180 ಸ್ಥಾನ ಗೆಲ್ಲಬೇಕು ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಟಾರ್ಗೆಟ್ ಫಿಕ್ಸ್ ಮಾಡಿದರು.

ಕುಮಾರಸ್ವಾಮಿ ಅಭಿಪ್ರಾಯವನ್ನು ಬಿಜೆಪಿ ನಾಯಕರು ಸ್ವಾಗತಿಸಿದರು. ಸ್ಥಳೀಯ ಕಾರ್ಯಕರ್ತರು, ನಾಯಕರಿಗೆ ಈ ಟಾರ್ಗೆಟ್ ರೀಚ್ ಮಾಡಬೇಕು ಎಂದ ನಿರ್ಣಯಿಸಿದ ದೋಸ್ತಿ ನಾಯಕರು ಬಿಹಾರ ಮಾದರಿಯಲ್ಲಿ ಚುನಾವಣೆ, ಟಾರ್ಗೆಟ್ 180 ಅಂತ ಸಭೆಯಲ್ಲಿ ಘೋಷಣೆ ಮೊಳಗಿಸಿದ್ರು.

### ಸಾಂವಿಧಾನಿಕ ಸಂಸ್ಥೆ ಘನತೆ ಕುಂದಿಸುವ ಕೆಲಸ



ಬೆಂಗಳೂರು: ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು, ರಾಜಕೀಯ ಲಾಭಕ್ಕಾಗಿ ಸಾಂವಿಧಾನಿಕ ಸಂಸ್ಥೆಯೊಂದರ ಘನತೆಯನ್ನು ಕುಂದಿಸುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಇಬ್ಬರು ಚುನಾವಣಾ ಆಯುಕ್ತರ ನಡುವೆ ಉಂಟಾಗಿರುವ ಭಿನ್ನಾಭಿಪ್ರಾಯ ಯಾವ ಕಾರಣಕ್ಕೆ ಬಂದಿದೆ? ಆ ಕು-ರಿತ ವರದಿಗಳ ಹಿಂದಿನ ಸತ್ಯಾಂಶವನ್ನು ಸಾರ್ವಜನಿಕರ ಮುಂದಿಡುವಂತೆ ಚುನಾವಣಾ ಆಯೋಗವನ್ನು ಒತ್ತಾಯಿಸಿದರು.



### ಚಡಚಣವನ್ನು ತೀವ್ರ ಬರವೆಂದು ಘೋಷಿಸಲು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಪ್ರಸಕ್ತ ವರ್ಷ ತಾಲೂಕಿನಲ್ಲಿ ತೀವ್ರ ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳು ಸಂಪೂರ್ಣ ಹದಗೆಟ್ಟಿದ್ದು, ಚಡಚಣ ತಾಲೂಕನ್ನು ತೀವ್ರ ಬರಪೀಡಿತ ಪ್ರದೇಶವೆಂದು ಘೋಷಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಘಟಕದ ರೈತರು ಗುರುವಾರ ಪ್ರತಿಭಟನೆ ನಡೆಸಿದರು.

ಈ ವೇಳೆ ತಹಶೀಲ್ದಾರ್ ಸಂಜಯ ಇಂಗಳೆ ಅವ-ರಿಗೆ ಮನವಿ ಸಲ್ಲಿಸಿದ ರೈತರು, ರಾಜ್ಯ ಸರ್ಕಾರ ಬುಧವಾರ ರಾತ್ರಿ ಚಡಚಣ ತಾಲೂಕನ್ನು ಮಧ್ಯಮ ಬರಪೀಡಿತ ತಾಲೂಕು ಎಂದು ಘೋಷಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ತಾಲೂಕಿನಲ್ಲಿ ವಾಸ್ತವ ಪರಿಸ್ಥಿತಿ ತೀವ್ರ ಬರದ ಪರಿಸ್ಥಿತಿಯಾಗಿದ್ದು, ಮಧ್ಯಮ ಬರಪೀಡಿತ ಎಂಬ ಘೋಷಣೆಯನ್ನು ಕೂಡಲೇ ಹಿಂಪಡೆದು "ತೀವ್ರ ಬರಪೀಡಿತ ತಾಲೂಕು" ಎಂದು ಘೋಷಿಸಬೇಕು ಎಂದು ಒತ್ತಾಯಿಸಿದರು.

ರೈತ ಮುಖಂಡ ವಸಂತ ಭೈರಾಮಡಿ ಮಾತನಾಡಿ, ತಾಲೂಕಿನಲ್ಲಿ ಮಳೆಯ ಕೊರತೆಯಿಂದ ಬೆಳೆಗಳು ಒಣಗುತ್ತಿದ್ದು, ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ಸರ್ಕಾರ ಬರ ಪರಿಸ್ಥಿತಿಯನ್ನು ವಾಸ್ತವಿಕವಾಗಿ ಪರಿಗಣಿಸಿ ಚಡಚಣವನ್ನು ತೀವ್ರ ಬರಪೀಡಿತ ತಾಲೂಕು ಎಂದು ಘೋಷಿಸಬೇಕು ಎಂದು ಆಗ್ರಹಿಸಿದರು.

ರೈತರ ನ್ಯಾಯಸಮ್ಮತ ಬೇಡಿಕೆಗಳನ್ನು ಸೆ.30ರೊಳಗಾಗಿ ಈಡೇ-ರಿಸದಿದ್ದರೆ, ವಿಜಯಪುರ ಸೋಲಾಪುರ ಚತುಷ್ಪಥ ಹೆದ್ದಾರಿ ಬಂದ್ ಮಾಡಿ ಉಗ್ರ ಹೋರಾಟ ನಡೆಸಲಾಗುವುದು ಎಂದು ವಸಂತ ಭೈರಾಮಡಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಫೇನಪ್ಪ ಬಿರಾದಾರ, ಮಹಾದೇವ ತೇಲಿ, ಸದಾನಂದ ಹಳದಕ್ಕಿ, ಮಹಾಂತೇಶ ಬಿರಾದಾರ, ಗುಂಡು ತೊಳನೂರ, ಸತೀಶ ತೊಳನೂರ, ರವಿ ಕಟ್ಟಿಮನಿ, ವಿಶ್ವನಾಥ ಬಿರಾದಾರ, ರೇವಪ್ಪ ತಿಡಗುಂದಿ ಸೇರಿದಂತೆ ಹಲವು ರೈತರು ಪಾಲ್ಗೊಂಡಿದ್ದರು.

### ವಿಜಯಪುರದಲ್ಲಿ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಸರ್ಕಾರಕ್ಕೆ ಆಗ್ರಹ

# ಯುಕೆಪಿ ಯೋಜನೆ ಪೂರ್ಣಗೊಳಿಸಲು ಆದ್ಯತೆ ನೀಡಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಆಲಮಟ್ಟಿ ಆಣೆಕಟ್ಟು ಎತ್ತರ ಹೆಚ್ಚಳದಿಂದ ಎಲ್ಲ ನೀರಾವರಿ ಯೋಜನೆಗಳು ಪೂರ್ಣಗೊಂಡರೆ ಹತ್ತು ಬರ ಬಂದರೂ ಯಾವ ಹಾನಿಯಾಗುವುದಿಲ್ಲ, ಹೀಗಾಗಿ ಬರವನ್ನು ಶಾಶ್ವತವಾಗಿ ದೂರ ಮಾಡುವ ನಿಟ್ಟಿನಲ್ಲಿ ಯುಕೆಪಿ ಯೋಜನೆಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡಿದರೆ ಉತ್ತರ ಕರ್ನಾಟಕ ಬರ ಮುಕ್ತವಾಗಲಿದೆ, ಹೀಗಾಗಿ ವಿಜಯಪುರ ಜಿಲ್ಲೆಯಲ್ಲಿ ಸಚಿವ ಸಂಪುಟದಲ್ಲಿ ಸಭೆ ನಡೆಸಿ ಈ ಮಹತ್ವದ ನಿರ್ಣಯ ಕೈಗೊಳ್ಳಿ ಎಂದು ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರಾವಳಿ ಭಾಗದಲ್ಲಿ ಸಚಿವ ಸಂಪುಟ ಸಭೆ ನಡೆಸಿ 38 ಸಾವಿರ ಕೋಟಿ ರೂ. ವಿಶೇಷ ಪ್ಯಾಕೇಜ್ ನೀಡುವ ಮೂಲಕ ಹೊಸ ಹೆಜ್ಜೆ ಸರ್ಕಾರ ಇರಿಸಿದೆ, ಅದೇ ತೆರನಾಗಿ ನಮ್ಮ ಭಾಗದಲ್ಲಿ ಸಚಿವ ಸಂಪುಟ ಸಭೆ ನಡೆಸಿ ಯುಕೆಪಿ ಯೋಜನೆಗಳಿಗೆ ಆದ್ಯತೆ ಹಾಗೂ ಜಿಲ್ಲೆಯ ವಿವಿಧ ಸಮಸ್ಯೆಗಳ ನಿವಾರಣೆಗೆ ಆದ-ತೆ ನೀಡಿ, ಕಲಬುರ್ಗಿ, ಮಂಗಳೂರು ಮೊದಲಾಧ ಕಡೆಗಳಲ್ಲಿ ಸಚಿವ ಸಂಪುಟ ಸಭೆ ನಡೆದಿದೆ, ನಮ್ಮಲ್ಲಿಯೂ ಸಚಿವ ಸಂಪುಟ ಸಭೆ ನಡೆಸಬೇಕು ಎಂದು ಒತ್ತಾಯಿಸಿದರು.

ಅತೀ ಹೆಚ್ಚು ಬರ ಎದುರಿಸಿದ ಜಿಲ್ಲೆ ವಿಜಯಪುರ, ಜಿಲ್ಲೆಯ ಇಂಡಿ, ಸಿಂದಗಿ, ಚಡಚಣ ಈ ತಾಲೂಕುಗಳು ಅತ್ಯಂತ ಭೀಕರ ಬರ ಪರಿಸ್ಥಿತಿ ಎದುರಿಸುವ ತಾಲೂಕುಗಳು, ಮತ್ತೊಂದು ಪಟ್ಟಿಯಲ್ಲಿಯೂ ಇಂಡಿ, ಚಡಚಣ ತಾಲೂಕುಗಳು ಹೆಸರು ಇರದೇ ಇರುವುದು ನನ್ನ ಮನಸ್ಸಿಗೆ ಬೇಜಾರಾಯಿತು. ಈ ಕಾರಣಕ್ಕೆ ರಾಜಿನಾಮೆ ನೀಡುವ ನಿರ್ಧಾರ ಪ್ರಕಟಿಸಿದ್ದೆ, ಆಗ ಸಂಜೆ ಪುನ: 29 ತಾಲೂಕುಗಳು ಘೋಷಣೆ ಮಾಡಲಾಗಿ ಅಲ್ಲಿ ಇಂಡಿ, ಚಡಚಣ ತಾಲೂಕುಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಲಾಯಿತು. ನಮ್ಮ ತಾಲೂಕುಗಳ ಪಟ್ಟಿಯಲ್ಲಿ ಇಂಡಿ ಹಾಗೂ ಚಡಚಣ ಘೋಷಣೆಯಾಗದಿರುವುದು ನನ್ನ ಮನಸ್ಸಿಗೆ ಸಮಾಧಾನವಾಗಿ ಸರ್ಕಾರಕ್ಕೆ ಧನ್ಯವಾದ ಅರ್ಪಿಸಿದೆ ಎಂದರು.



ಬರ ನಿರ್ವಹಣೆ ಹಾಗೂ ಮೇಲುಸ್ತುವಾ-ರಿಗಾಗಿ ಸರ್ಕಾರ ಸಚಿವ ಸಂಪುಟ ಉಪ ಸಮಿತಿ ಸಹ ರಚಿಸಿದ್ದು, ಈ ಸಮಿತಿ ಕಾಲ ಕಾಲಕ್ಕೆ ಸಭೆ ನಡೆಸುತ್ತಿದೆ, ಬರಗಾಲದ ಮುನ್ಸೂಚನೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಎಪ್ರಿಲ್ ತಿಂಗಳಲ್ಲಿಯೇ ಬರ ಪರಿಸ್ಥಿತಿ ಎದುರಿಸುವ ನಿಟ್ಟಿನಲ್ಲಿ ಸಿದ್ಧತೆ ನಡೆಸಿತ್ತು. ಕೇಂದ್ರ ಸರ್ಕಾರ ರೂಪಿಸುವ ಬರ ನಿರ್ವಹಣೆ ಮಾರ್ಗಸೂಚಿ ಅನ್ವಯ ನಿಭಾಯಿಸಲಾಗುತ್ತಿದೆ, ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ ಮೊದಲಾದವುಗಳನ್ನು ಸಮರ್ಥವಾಗಿ ಸರ್ಕಾರಗಳು ಎದುರಿಸಿದರೂ ಸಹ ಪ್ರಾಕೃತಿಕ ವಿಕೋಪಗಳಿಂದ ಆಗುವ ಹಾನಿಯನ್ನು ಯಾರೂ ಭರಿಸಲು ಸಾಧ್ಯವಿಲ್ಲ ಎಂದರು. ಬರ ಪರಿಸ್ಥಿತಿ ಕೇಂದ್ರ ಸರ್ಕಾರಕ್ಕೆ ವಾಸ್ತವಿಕ ವರದಿ ನೀಡಬೇಕಾಗಿರುವುದರಿಂದ ಹಂತ ಹಂತವಾಗಿ ಬರ ಘೋಷಣೆ ಮಾಡಲಾಗುತ್ತಿದೆ, ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ ಮೂರು ವಾರಗಳ ಮಳೆ ಕೊರತೆ, ತೇವಾಂಶ ಕೊರತೆ, ಬೆಳೆ ಹಾನಿ ಎಲ್ಲ ಆಯಾಮಗಳಲ್ಲಿಯೂ ಅವಲೋಕಿಸಿ ಬರ ಘೋಷಣೆ ಮಾಡಲಾಗುತ್ತಿದೆ, ಯಾವ ವಿಷಯದಲ್ಲಿಯೂ ಹಿನ್ನೆಡೆಯಾಗಬಾರದು ಎಂದು ಅತ್ಯಂತ ಅವೈಜ್ಞಾನಿಕವಾಗಿ, ನಿಖರವಾಗಿ ಕೇಂದ್ರ ಸರ್ಕಾರದ ಮಾರ್ಗಸೂಚಿ ಪಾಲಿಸಲಾಗುತ್ತಿದೆ ಎಂದರು.

### ಹೊಸ ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ ಬೇಡ

ರಾಜಕೀಯ ಕಾರಣಕ್ಕೆ ಅನೇಕ ಸಕ್ಕರೆ ಕಾರ್ಖಾನೆಗಳಿಗೆ ಅನುಮತಿಯನ್ನು ಬೇಕಾಬಿಟ್ಟಿಯಾಗಿ ನೀಡಲಾಗಿದೆ, ಹೊಸ 8 ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ ನೀಡಲಾಗುತ್ತಿದೆ, ಇತ್ತ ಕಬ್ಬಿನ ಕ್ಷೇತ್ರ ಹೆಚ್ಚುತ್ತಿಲ್ಲ, ಆದರೂ ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ ನೀಡಲಾಗುತ್ತದೆ, ಕಬ್ಬಿನ ಕ್ಷೇತ್ರ ಹೆಚ್ಚಾಗದೇ ವಿನಾಕಾರಣ ಒತ್ತಡಕ್ಕೆ ಮಣಿದು ಕಾರ್ಖಾನೆಗಳಿಗೆ ಅನುಮತಿ ನೀಡುತ್ತಿರುವುದು ಸರಿಯಲ್ಲ ಎಂದು ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

### ನೆರೆ & ಬರ ನಿರ್ವಹಣೆಗೆ ಪ್ರತ್ಯೇಕ ಇಲಾಖೆ ಸ್ಥಾಪಿಸಿ

ನೆರೆ ಹಾಗೂ ಬರ ನಿರ್ವಹಣೆ ಹಿನ್ನೆಲೆಯಲ್ಲಿ ಪ್ರತ್ಯೇಕವಾದ ಇಲಾಖೆಯನ್ನೇ ಸ್ಥಾಪಿಸಿ ಈ ಪರಿಸ್ಥಿತಿ ನಿಭಾಯಿಸುವ ಹೊಣೆಗಾರಿಕೆ ವಹಿಸಬೇಕಿದೆ ಎಂದು ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಸಲಹೆ ನೀಡಿದರು. ನೆರೆ ಹಾಗೂ ಬರ ಅನೇಕ ಬಾರಿ ನಮ್ಮ ರಾಜ್ಯ ಎದುರಿಸುತ್ತಿದೆ, ಒಮ್ಮೆ ಬರ ಬಂದರೆ, ಇನ್ನೊಮ್ಮೆ ನೆರೆ, ಹೀಗಾಗಿ ಪ್ರಾಕೃತಿಕ ವಿಕೋಪಗಳು ಕಾಡುವುದು ಸಹಜ, ಈ ಎಲ್ಲ ವಿಕೋಪಗಳು ಬಂದಾಗ ಅದರ ನಿರ್ವಹಣೆಗೆ ಎಲ್ಲ ಇಲಾಖೆಗಳು ಸಮನ್ವಯ ಸಾಧಿಸುವುದು ಕರ್ತವ್ಯ, ಇದಕ್ಕಾಗಿಯೇ ಪ್ರತ್ಯೇಕ ಇಲಾಖೆ ಇದ್ದರೆ ಸೂಕ್ತ, ಮಹಾರಾಷ್ಟ್ರ, ರಾಜಸ್ತಾನ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಈ ಬರ ಹಾಗೂ ನೆರೆ ನಿರ್ವಹಣೆಯ ಪ್ರತ್ಯೇಕ ಇಲಾಖೆ ರೂಪಿಸಲಾಗಿದೆ, ಇದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಪ್ರತ್ಯೇಕ ಇಲಾಖೆ ಸ್ಥಾಪನೆಯಾಗಬೇಕಾಗಿರುವುದು ಅಗತ್ಯವಾಗಿದೆ ಎಂದರು.

# ಚುನಾವಣಾ ಆಯುಕ್ತ ದಲಿತರಾಗಿರುವುದು ಕಾಂಗ್ರೆಸ್ ಅಸಹನೆಗೆ ಕಾರಣ

### ವಿಜಯಪುರದಲ್ಲಿ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಆರೋಪ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಂದ್ರಕುಮಾರ ಓರ್ವ ದಲಿತ ಪ್ರತಿಭಾವಂತ ಅಧಿಕಾರಿ. ಓರ್ವ ದಲಿತ ವ್ಯಕ್ತಿ ಮುಖ್ಯ ಚುನಾವಣಾ ಆಯುಕ್ತರಾಗಿರುವುದು ಕಾಂಗ್ರೆಸ್‌ಗೆ ಸಹಿಸಿಕೊಳ್ಳಲು ಆಗುತ್ತಿಲ್ಲ, ಹೀಗಾಗಿ ಅವರ ಮೇಲೆ ಆದ-ಾರ ರಹಿತ ಆರೋಪ ಮಾಡುತ್ತಿದೆ ಎಂದು ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಡಿದ ಅವರು, ಈ ಹಿಂದೆ ಬಾಬು ಜಗಜೀವನರಾಂ ಅವರು ಪ್ರಧಾನಿಯಾಗುತ್ತಾರೆ ಎಂದು ಸಹಿಸಿಕೊಳ್ಳದೇ ಅವರನ್ನು ಚುನಾವಣೆಯಲ್ಲಿ ಸೋಲಿಸಲಾಯಿತು, ಈಗ ದಲಿತ ಸಮುದಾಯದ ವ್ಯಕ್ತಿ ಈ ಉನ್ನತ ಹುದ್ದೆಯಲ್ಲಿ ಕೂರುವುದು ಅವರಿಗೆ ಸರಿ ಇರಲಿಲ್ಲ, ದಲಿತ ಅಷ್ಟೇ ಮುಸಲ್ಮಾನರೂ ಉನ್ನತ ಹುದ್ದೆಯಲ್ಲಿರಬಾರದು ಎನ್ನುವುದು ಕಾಂಗ್ರೆಸ್‌ನ ಕೀಳುಮಟ್ಟದ ಮನಸ್ಥಿತಿ, ಹೀಗಾಗಿಯೇ ಜ್ಞಾನೇಂದ್ರಕುಮಾರ್ ಅವರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದೆ ಎಂದರು.

ನ್ಯಾಯಾಲಯದಲ್ಲಿಯೂ ಬೇರೆ ಬೇರೆ ಪೀಠ ಇರುತ್ತದೆ, ಒಂದು ಪೀಠ ಇನ್ನೊಂಧು ತೀರ್ಪು, ಇನ್ನೊಂದು ಪೀಠ ಇನ್ನೊಂದು ತೀರ್ಪು ನೀಡುತ್ತದೆ, ಇದು ಅಭಿಪ್ರಾಯ, ಅದೇ ರೀತಿ ಚುನಾವಣಾ ಆಯುಕ್ತರ ಅಭಿಪ್ರಾಯ ಬೇಧ ಇರಬಹುದು ಎಂದರು.

ಅಲ್ಪಸಂಖ್ಯಾತ ಮುಸ್ಲಿಂರು ಹಾಗೂ ದಲಿತ ಬಾಂಧವರು ಕೇವಲ ಕಾಂಗ್ರೆಸ್ ವೋಟ್ ಬ್ಯಾಂಕ್, ನಿಜಕ್ಕೂ ಈ ದೇಶದ ಮುಸಲ್ಮಾನಿರಿಗೆ ಹಾಗೂ ದಲಿತರಿಗೆ ಅನ್ಯಾಯವಾಗಿದ್ದು ಕಾಂಗ್ರೆಸ್‌ನಿಂದ ಎಂದರು.

ಓರ್ವ ಪ್ರತಿಭಾವಂತ ವಿದ್ಯಾರ್ಥಿ, ಅಸ್ಪೃಶ್ಯ ಸಮುದಾಯದಿಂದ ಬಂದ ವ್ಯಕ್ತಿ ಚುನಾವಣಾ ಆಯೋಗದಂತಹ ಶ್ರೇಷ್ಠ ಹುದ್ದೆಯಲ್ಲಿರುವುದು ಕಾಂಗ್ರೆಸ್‌ಗೆ ಸಹನೆಯಾಗುತ್ತಿಲ್ಲ ಎಂದರು. ಚುನಾವಣಾ ಆಯೋಗದ ಆಯುಕ್ತರ ಮೇಲೆ ವಿನಾಕಾರಣ ಆರೋಪ ಹೊರೆಸಿವ ಮೂಲಕ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧೀ ಪ್ರಜಾಪ್ರಭುತ್ವಕ್ಕೆ ಕಪ್ಪು ಚುಕ್ಕೆ ಇರಿಸುವ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ತರುವ ಕೆಲಸ ಮಾಡುವಲ್ಲಿ ತೊಡಗಿದ್ದಾರೆ, ಚುನಾವಣಾ ಆಯೋಗ ನಿಷ್ಪಕ್ಷಪಾತವಾಗಿರದೇ ಹೋಗಿದ್ದರೆ ನೀವು ಹೇಗೆ ಗೆದ್ದಿರಿ? ನಿಮ್ಮ ಸಹೋದರಿ ವೈಯನಾಡಿನಲ್ಲಿ ಹೇಗೆ ಗೆದ್ದರು? ಎಂದು ಪ್ರಶ್ನಿಸಿದರು. ಕೆಲಸಕ್ಕೆ ಬಾರದ ಕ್ರೇಜ್ರಿವಾಲ್ ಈ ಕಾಂಗ್ರೆಸ್‌ನವರ ಜೋಡಿ ಕೂಡಿದ್ದಾರೆ, ಈ ಹಿಂದೆ ನವದೆಹಲಿ, ಪಂಜಾಬ್‌ನಲ್ಲಿ ಆಪ್ ಹೇಗೆ ಗೆದ್ದಿತು? ಇದನ್ನು ಸಹ ಅವರು ಬಹಿರಂಗಪಡಿಸಬೇಕು ಎಂದರು. ವಿದೇಶ ಪೌರತ್ವದ ಭೂತ ಈ ನಕಲಿ ಗಾಂಧೀ ಕುಟುಂಬದ ಸದಸ್ಯರಿಗೆ ಬೆನ್ನು ಹತ್ತಿದೆ, ಇದನ್ನು ಡೈವೇರ್ಟ್ ಮಾಡುವ ಉದ್ದೇಶದಿಂದ ಈ ಎಲ್ಲ ವಿಷಯಗಳನ್ನು ಅವರು ಮುನ್ನೆಲೆಗೆ ತರುತ್ತಿದ್ದಾರೆ ಎಂದು ಸಂಸದ ಗೋವಿಂದ ಕಾರಜೋಳ ದೂರಿದರು.

### ಪ್ರತಿ ಜಿಲ್ಲೆಗೆ 100 ಕೋಟಿ ರೂ. ಪ್ಯಾಕೇಜ್ ಘೋಷಿಸಿ

"ಬರ ನಿರ್ವಹಣೆಯನ್ನು ನಿಭಾಯಿಸುವಲ್ಲಿ ಸರ್ಕಾರ ಯವ ತಯಾರಿಯೂ ಮಾಡಿಕೊಂಡಿಲ್ಲ, ನೀರಿಲ್ಲ, ವಿದ್ಯುತ್ ಇಲ್ಲ, ಮೇವಿಲ್ಲ, ಕೂಡಲೇ ಲೋಡಶೆಡ್ಡಿಂಗ್ ನಿಲ್ಲಿಸಿ ವಿದ್ಯುತ್ ಸಮರ್ಪಕ ಪೂರೈಕೆಗೆ ಆದ್ಯತೆ ನೀಡಿ, ಕೂಡಲೇ ಪ್ರತಿ ಜಿಲ್ಲೆಗೆ 100 ಕೋಟಿ ರೂ. ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು, ಇದರಲ್ಲಿ ಗೋಶಾಲೆ ಸೇರಿದಂತೆ ವಿವಿಧ ಕಾಮಗಾರಿ ಕೈಗೊಳ್ಳಲು ಸಾಧ್ಯ."

■ ಗೋವಿಂದ ಕಾರಜೋಳ
ಚಿತ್ರದುರ್ಗ ಸಂಸದರು

### ಸಂವಿಧಾನಕ್ಕಿಂತ ಯಾರೂ ದೊಡ್ಡವರಲ್ಲ

ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ 18 ಸಾವಿರಕ್ಕೂ ಹೆಚ್ಚು ಆಕ್ಷೇಪಣೆಗಳನ್ನು ಸಲ್ಲಿಕೆ ಮಾಡಿದ್ದೇವೆ ಎಂದು ಬಿಜೆಪಿ ಪಾಲಿಕೆ ಸದಸ್ಯರು ಆರೋಪ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಈ ರೀತಿಯ ಅಸಂಬದ್ಧವಾಗಿ ನಡೆದುಕೊಂಡಿರುವುದು ಯಾರೇ ಆಗಲಿ ಅದು ತಪ್ಪು, ಆದರೆ ನಮ್ಮ ಪಕ್ಷದಿಂದ ಇ ನಡೆ ಅನುಸ-ರಿಸಲಿಲ್ಲ. ಅದು ಪಕ್ಷದ ನಿಲುವಲ್ಲ, ಮೋಸದಾಟ ಯಾರೇ ಮಾಡಿದರೂ ಸಹ ಅದು ತಪ್ಪು, ಅವರ ಮೇಲೆ ಕಾನೂನು ಕ್ರಮ ಜರುಗಿಸಬೇಕು, ಆದರೆ ನಮ್ಮ ಪಕ್ಷಕ್ಕೂ ಇದಕ್ಕೂ ಸಂಬಂಧವಿಲ್ಲ, ಅಷ್ಟೂ ಮೀರಿ ಯಾರೇ ಇರಲಿ ಅವರು ಸಂವಿಧಾನದಿಂದ ದೊಡ್ಡವರೇನಲ್ಲ ಎಂದು ಸಂಸದ ಕಾರಜೋಳ ಪ್ರತಿಕ್ರಿಯೆ ನೀಡಿದರು.

# ಶಿಕ್ಷಣ ಪ್ರವರ್ತಕ ರಾವ್ ಬಹಾದ್ದೂರ್ ಗಿಲಗಂಚಿ ಗುರುಸಿದ್ದಪ್ಪ




■ ಉದಯರಶ್ಮಿ ದಿನಪತ್ರಿಕೆ

ಗಿಲಗಂಚಿ ಗುರುಸಿದ್ದಪ್ಪನವರು ಉತ್ತರ ಕರ್ನಾಟಕದ ಪ್ರಮುಖ ಶಿಕ್ಷಣ ಪ್ರವರ್ತಕರು, ಲಿಂಗಾಯತ ಧರ್ಮದ ಸಂಘಟಕರು, ಸಮಾಜ ಸುಧಾರಕರು ಮತ್ತು ಬ್ರಿಟಿಷ್ ಆಡಳಿತಾವಧಿಯಲ್ಲಿ ಧಾರವಾಡದ ಡೆಪ್ಯೂಟಿ ಕಲೆಕ್ಟರ್ ಆಗಿ ಸೇವೆ ಸಲ್ಲಿಸಿದ ಹಿರಿಯ ಅಧಿಕಾರಿಯಾಗಿದ್ದರು. ಮುಂಬೈ ಕರ್ನಾಟಕ ಭಾಗದಲ್ಲಿ ಲಿಂಗಾಯತ ಸಮುದಾಯ ಮತ್ತು ಶೋಷಿತ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಇವರು ನೀಡಿದ ಕೊಡುಗೆ ಅನನ್ಯವಾದದ್ದು.

ಜನನ ಮತ್ತು ಶಿಕ್ಷಣ

ಗಿಲಗಂಚಿ ಗುರುಸಿದ್ದಪ್ಪನವರು 1841 ರಂದು ಧಾರವಾಡದ ಲಿಂಗಾಯತ ನೇಕಾರ( ಹಟಗಾರ ) ಕುಟುಂಬದಲ್ಲಿ ಜನಿಸಿದರು. ಬಾಲಕ

ಗುರುಸಿದ್ದಪ್ಪನವರು ತುಂಬಾ ಚತುರ ಮತ್ತು ಬುದ್ಧಿವಂತನಾಗಿದ್ದನು. ಹೀಗಾಗಿ ಇವರ ತಂದೆ ವೀರಬಸಪ್ಪ ಇವರ ಶಿಕ್ಷಣಕ್ಕೆ ಯಾವುದೇ ಅಡಚಣೆಯಾಗದಂತೆ ನೋಡಿಕೊಂಡರು.

1. ಶೈಕ್ಷಣಿಕ ಕ್ರಾಂತಿ ಮತ್ತು ಸಂಸ್ಥೆಗಳ ಸ್ಥಾಪನೆ

ಲಿಂಗಾಯತ ಎಜುಕೇಶನ್ ಅಸೋಸಿಯೇಷನ್ (ಐಇಂ): ಒಂದು ದಿನ ರಾವ್ ಬಹದ್ದೂರ ಗಿಲಗಂಚಿ ಗುರುಸಿದ್ದಪ್ಪನವರು ತಮ್ಮ ಆಪ್ತ ಮಿತ್ರರು ಇವರ ಜೊತೆಗೆ ಕೆಲಸ ನಿರ್ವಹಿಸುವ ಶ್ರೀ ಅರಟಾಳ ರುದ್ರಗೌಡರು ಮತ್ತು ಇತರ ಸ್ನೇಹಿತರೊಂದಿಗೆ ಒಂದು ದಿನ ಸಂಜೆ ಮೈಲಾರ ಗುಡ್ಡಕ್ಕೆ



ವಾಕಿಂಗ್ ವಸ್ತು ವಿಹಾರಕ್ಕೆ ಹೋಗುವಾಗ ಬೇರೆ ಬೇರೆ ವಿಷಯ ಮಾತನಾಡುತ್ತಾ ಲಿಂಗಾಯತರು ಏಕೆ ಹಿಂದುಳಿದಿದ್ದಾರೆ ಎಂದು ಚರ್ಚಿಸ ತೊಡಗಿದರು. ಇದಕ್ಕೆ ಮುಖ್ಯ ಕಾರಣ ಬಡತನ ಶಿಕ್ಷಣ ಇಲ್ಲದಿರುವುದು.

ಶೈಕ್ಷಣಿಕ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಎಲ್ ಇ ಎ ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಷನ್ ಎಂಬ ಸಂಸ್ಥೆಯನ್ನು 1883 ರಲ್ಲಿ 215500 ರೂಪಾಯಿ ಹಣವನ್ನು ಡಿಪಾಸಿಟ್ ಮಾಡಿ ಅದರ ಬಡ್ಡಿಯಲ್ಲಿ ಲಾಕ್ ಲಿಂಗಾಯತ ಶಿಷ್ಯ ವೇತನ ಸ್ಕಾಲರ್ಶಿಪ್ ಫಂಡ್ ಬರುವಂತೆ ಯೋಜನೆಯನ್ನು ಜಾರಿಗೆ ತಂದರು.

ಗಿಲಗಂಚಿ ಗುರುಸಿದ್ದಪ್ಪನವರು ಮತ್ತು ಅರಟಾಳ ರುದ್ರಗೌಡರು ಸೇರಿ 1883 ರಲ್ಲಿ ಧಾರವಾಡದಲ್ಲಿ ಋಟಿ–ರಚಿಥಿಚಿಣ ಇಜಣ–ಛಿಚಿಣುಠಟಿ ೧ಂಭಿಚಿ–ಣುಠಟಿ ಸಂಸ್ಥೆಯನ್ನು ಸ್ಥಾಪಿಸಿದರು. ಈ ಭಾಗದ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಇದು ಪ್ರಮುಖ ಆಧಾರವಾಯಿತು. ಉತ್ತರ ಕರ್ನಾಟಕದ ಡಾ ಫ ಗು ಹಳಕಟ್ಟಿ ಅವರನ್ನೂ ಸೇರಿ ಅನೇಕ ಮಹನೀಯರು ಈ ಸಂಸ್ಥೆಯಿಂದ ಶಿಷ್ಯ ವೇತನ ಪಡೆದು ಬೆಳೆದವರು.



ಬಿ ಎಲ್ ಡಿ ಇ ಶಿಕ್ಷಣ ಸಂಸ್ಥೆಯ ಮುಖ್ಯ ಶಿಲ್ಪಿ ಡಾ ಫ ಗು ಹಳಕಟ್ಟಿ ಇವರೂ ಸಹಿತ ರಾವ್ ಬಹದ್ದೂರ ಗಿಲಗಂಚಿ ಗುರುಸಿದ್ದಪ್ಪನವರು ಸ್ಥಾಪಿಸಿದ ಲಿಂಗಾಯತ ಫಂಡ್' ನೆರವು ಮತ್ತು ಶಿಷ್ಯವೇತನದಿಂದಲೇ ತಮ್ಮ ಪದವಿ ಮತ್ತು ವಕೀಲಿ ಕೋರ್ಸ್ ಮಾಡಿದ್ದು.

ಕೆ.ಎಲ್.ಇ ಸಂಸ್ಥೆಗೆ ಮುನ್ನುಡಿ

ಇವರು ಸ್ಥಾಪಿಸಿದ್ದ 'ಲಿಂಗಾಯತ ಫಂಡ್' ನೆರವು ಮತ್ತು ಶಿಷ್ಯವೇತನದಿಂದಲೇ ಅಂದಿನ ಪ್ರಮುಖ ಸಪ್ತರ್ಷಿಗಳು ಪ್ರೊ ಶಿ ಶಿ ಬಸವನಾಳ ಪ್ರೊ ಎಂ ಆರ್ ಸಾಖರೆ ಬಿ ಎಸ್ ಹಂಚಿನಾಳ ಏಚ್ ಎಫ ಕಟ್ಟಿಮನಿ ಬಿ ಬಿ ಮಮದಾಪೂರ ಪಂಡಿತಪ್ಪ ಚಿಕ್ಕೋಡಿ ಸರ್ದಾರ್ ವೀರನಗೌಡ ಪಾಟೀಲ (ಏಳು ಜನ ಶಿಕ್ಷಕರು) ಉನ್ನತ ಶಿಕ್ಷಣ ಪಡೆದಿದ್ದರು. ಇದೇ ಪ್ರೇರಣೆಯಿಂದ ಮುಂದೆ ಪ್ರಸಿದ್ಧ ಏಐಇ ಶಿಕ್ಷಣ ಸಂಸ್ಥೆ 1916 ರಲ್ಲಿ ಉದಯಿಸಲು ಸಾಧ್ಯವಾಯಿತು.

2. ಸಾಮಾಜಿಕ ಸೇವೆ ಮತ್ತು ಸಂಘಟನೆ

ಅಖಿಲ ಭಾರತ ವೀರಶೈವ ಮಹಾಸಭೆ: ಸಮಾಜದ ಸುಧಾರಣೆ



ಮತ್ತು ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವ ಉದ್ದೇಶದಿಂದ ಸ್ಥಾಪನೆಯಾದ ವೀರಶೈವ ಮಹಾಸಭೆಯ ಆರಂಭಿಕ ದಿನಗಳಲ್ಲಿ ಅರಟಾಳ ರುದ್ರಗೌಡರು, ಸರ್ದಾರ್ ಬುಳ್ಳಪ್ಪ ಮಾಮಲೆದೇಸಾಯಿ ಮುಂತಾದ ಧೀಮಂತರು ಸೇರಿ ಸಮಾಜ ಸಂಘಟನೆಗೆ ಇವರು ಸ್ಪೂರ್ತಿಯಾದರು.

ದೂರದೃಷ್ಟಿಯ ನಾಯಕತ್ವ

ಲಿಂಗಾಯತ ಸಮಾಜ ಸುಶಿಕ್ಷಿತವಾಗಬೇಕೆಂಬ ಹಂಬಲದಿಂದ ತಮ್ಮ ಇಡೀ ಜೀವನ ಹಾಗೂ ಸಂಪತ್ತನ್ನು ಧಾರೆ ಎರೆದ ಇವರನ್ನು ಉತ್ತರ ಕರ್ನಾಟಕದ ಶೈಕ್ಷಣಿಕ ರಂಗದ ಪ್ರಾತಃಸ್ಮರಣೀಯರೆಂದು ಗೌರವಿಸಲಾಗುತ್ತದೆ.

ಲಿಂಗಾಯತ ಸಮಾಜದಲ್ಲಿ ಮೊಟ್ಟ ಮೊದಲ ಡೆಪ್ಯುಟಿ ಕಮಿಷನರ್ ಆಗಿ ನೇಮಕ ಗೊಂಡ ಪ್ರಥ–'ಮರು ರಾವ್ ಬಹದ್ದೂರ ಗಿಲಗಂಚಿ ಗುರುಸಿದ್ದಪ್ಪನವರು.

ಉದಾರತ್ವತನಕ್ಕೆ ಮಾದರಿ



1884 ರಲ್ಲಿ ಪುಣೆಯಲ್ಲಿ ಓದುವ ನಾಲ್ಕು ವಿದ್ಯಾರ್ಥಿಗಳಿಗೆ ಪ್ರತಿಯೊಬ್ಬರಿಗೂ ತಿಂಗಳಿಗೆ

80 ರೂಪಾಯಿಯಂತೆ ತಿಂಗಳಿಗೆ 320 ರೂಪಾಯಿಯನ್ನು ಐದು ತಿಂಗಳು ತಮ್ಮ ಸ್ವಂತ ಹಣ ಕೊಡುತ್ತಿದ್ದರು. ಕಾರಣ ಲಿಂಗಾಯತ ವೆಲ್ ಫೇರ್ ಫಂಡ್ ಬಡ್ಡಿ ಜಮಾ ಆಗಿರದ ಕಾರಣ ತಮ್ಮ ಹಣವನ್ನು ಕೊಟ್ಟು ವಿದ್ಯಾರ್ಥಿಗಳನ್ನು ಕಲಿಸಿದರು. ರಾವ್ ಬಹದ್ದೂರ ಗಿಲಗಂಚಿ ಗುರುಸಿದ್ದಪ್ಪನವರು 1890 ರಲ್ಲಿ ಒಂದು ದಿನ ಮಧ್ಯಾನ್ಹ ಊಟ ಮಾಡಿ ಪ್ರಾಂಗಣದಲ್ಲಿ ಕುರ್ಚಿಯ ಮೇಲೆ ವಿಶ್ರಾಂತಿ ಪಡೆಯುತ್ತಿರುವ ಸಂದರ್ಭದಲ್ಲಿ ಒಬ್ಬ ಬಡ ವಿದ್ಯಾರ್ಥಿ ಬಂದು ತನ್ನ ಕಾಲೇಜಿಗೆ ಫೀ ಕಟ್ಟಲು ಹಣ ಬೇಕೆಂದು ಕೇಳಿಕೊಂಡಾಗ

ರಾವ್ ಬಹದ್ದೂರ ಗಿಲಗಂಚಿ ಗುರುಸಿದ್ದಪ್ಪನವರು ಎದ್ದು ಗೂಟಕ್ಕೆ ನೇತು ಹಾಕಿದ್ದ ತಮ್ಮ ಕೋಟ್ ನ ಕಿಸೆಯಲ್ಲಿ ಕೈಹಾಕಿದಾಗ ಅಲ್ಲಿ ಒಂದು ಅಣೆ ಪೈಸೆ ದೊರೆಯಲಿಲ್ಲ .

ಕಣ್ಣೀರು ಕೆನ್ನೆಯ ಮೇಲೆ ಹರಿದವು. ಅಸಹಾಯಕನಾಗಿ ದುಡ್ಡಿಲ್ಲ ಕ್ಷಮಿಸು ಎಂದು ಹೇಳಿ ಕಳುಹಿಸಿದರು. ವಿದ್ಯಾರ್ಥಿ ಮನೆಯ ಕಾಂಪೌಂಡ್ ದಾಟುವ ಮುನ್ನ ತಮ್ಮ ಎದೆಯ ಮೇಲಿನ ಬಂಗಾರದ ಗುಂಡಗಡಗಿ ಕರಡಿಗೆ ತೆಗೆದು ಇಷ್ಟ ಲಿಂಗವನ್ನು ಕೈಯಲ್ಲಿ ಹಿಡಿದು ಬಿಳಿ ಬಟ್ಟೆಯಲ್ಲಿ ಕಟ್ಟಿ ಬಂಗಾರದ ಗುಂಡಗಡಗಿಯನ್ನು ಬಡ ವಿದ್ಯಾರ್ಥಿಗೆ ಕೊಟ್ಟು. " ನೋಡು ಇದನ್ನು ಮಾರಿ ನಿನ್ನ ಇಡೀ ಶಿಕ್ಷಣವನ್ನು ಮುಗಿಸು ಎಂದು ಹರಸಿ ಕಳುಹಿಸಿದ ಮಹಾ ಮಾನವತಾವಾದಿ ರಾವ್ ಬಹದ್ದೂರ ಗಿಲಗಂಚಿ ಗುರುಸಿದ್ದಪ್ಪನವರು.

ಕೊನೆಯ ಸಂದೇಶ

ರಾವ್ ಬಹದ್ದೂರ ಗಿಲಗಂಚಿ ಗುರುಸಿದ್ದಪ್ಪನವರು ತಮ್ಮ ಐವತ್ತನೆಯ ವಯಸ್ಸಿನಲ್ಲಿ ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಅವರನ್ನು ನೋಡಲು ಇವರ ಆಪ್ತ ಮಿತ್ರರು ಅರಟಾಳ ರುದ್ರಗೌಡರು ಭೇಟಿಗೆ ಬಂದರು " ರಾವ್ ಸಾಹೇಬ್ ಗುರುಸಿದ್ದಪ್ಪನವರೇ ನಮಗೆ ಏನಾದರೂ ತಮ್ಮ ಸಂದೇಶ ಮಾರ್ಗದರ್ಶನ ನೀಡುತ್ತೀರಾ ಎಂದು ಕೇಳಿದಾಗ ಮುಗುಳು ನಕ್ಕು, ರುದ್ರಗೌಡರೆ ನಾವಿಬ್ಬರೂ ಆರಂಭಿಸಿದ ಲಿಂಗಾಯತ ಶಿಕ್ಷಣ ಅಭಿವೃದ್ಧಿ ಸಂಸ್ಥೆ ಲಿಂಗಾಯತ ಎಜುಕೇಶನ್ ಅಸೋಸಿಯೇಷನ್ (ಐಇಂ)

ಎಲ್ಲಾ ಬಡ ಮಕ್ಕಳ ಶಿಕ್ಷಣಕ್ಕೆ ನಿರಂತರವಾಗಿ ಶಿಷ್ಯವೇತನ ನೀಡಿ. ಯಾರೂ ಶಿಕ್ಷಣ ವಂಚಿತರಾಗಬಾರದು. ಬಸವಾದಿ ಶರಣರ ಕಾಯಕ ದಾಸೋಹ ನಿಲ್ಲಬಾರದು ಎಂದು ಅವರಿಂದ ಪ್ರಮಾಣ ಮಾಡಿಸಿಕೊಂಡರು. 22ಜೂನ್ 1891 ರಂದು ಅವರು ಬಯಲಲ್ಲಿ ಬಯಲಾದರು.

ಇಂತಹ ಅಪರೂಪದ ಮಹಾಶರಣ ರಾವ್ ಬಹದ್ದೂರ ಗಿಲಗಂಚಿ ಗುರುಸಿದ್ದಪ್ಪನವರು ನಾಗರಿಕ ಸಮಾಜಕ್ಕೆ ಲಿಂಗಾಯತ ಸಮಾಜದವರಿಗೆ ನಿತ್ಯ ಸ್ಮರಣೀಯರು ಸಾವಿಲ್ಲದ ಶರಣರು.



# ಕಬ್ಬಿಗೆ ದರ ಘೋಷಣೆ ಆಗುವವರೆಗೂ ಕಾರ್ಖಾನೆ ಆರಂಭ ಬೇಡ


■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯಲ್ಲಿಯ 10 ಸಕ್ಕರೆ ಕಾರ್ಖಾನೆಗಳನ್ನು ಈ ವರ್ಷ ಪ್ರಾರಂಭ ಮಾಡುವುದುದಕ್ಕೂ ಮುಂಚೆ ಎಲ್ಲಾ ಕಾರ್ಖಾನೆ ಮಾಲಿಕರು ಹಾಗೂ ರೈತ ಮುಖಂಡರೊಡನೆ ಸಭೆ ಕರೆದು, ಈ ವರ್ಷದ ಕಬ್ಬಿನ ದರ ನಿಗದಿ ಪಡೆಸುವುದು ಹಾಗೂ ಕಳೆದ ವರ್ಷದ ಬಾಕಿ ಬಿಲ್ ಹಾಗೂ 50 ರೂಪಾಯಿ ಬಿಡುಗಡೆಗೊಳಿಸವುದು ಹಾಗೂ ಕಬ್ಬಿನ ತೂಕದಲ್ಲಿ ಆಗುತ್ತಿರುವು ಮೊಸದ ಕು–ರಿತು ಕಟ್ಟೆಚ್ಚರಿಕೆಯ ಕ್ರಮ ಕೈಗೊಂಡ ನಂತರ ಅನುಮತಿ ನೀಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಜಿಲ್ಲಾಧಿಕಾರಿ ಡಾ.ಕೆ. ಆನಂದ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ ಸಂಗಮೇಶ ಸಗರ, ಸೆಪ್ಟೆಂಬರ 29 ನೇ ತಾ–ರಿಖಿನಂದು ಹುಬ್ಬಳ್ಳಿಯ ಪ್ರಹ್ಲಾದ ಜೋಶಿ ಅವರ ಮುತ್ತಿಗೆ ಹಾಗೂ ಚರ್ಚೆ ನಂತರ ಗುರ್ಲಾಪುರ ಹೋರಾಟ ಮಾಡಲಾಗುವುದು. ಈ ವರ್ಷದಲ್ಲಿ ರಾಜ್ಯ ಮತ್ತು ಕೆಂದ್ರ ಸರ್ಕಾರ ಸೇರಿ ಒಂದು ಪ್ರತಿಟನ್ ಕಬ್ಬಿಗೆ 1000 ದಂತೆ ಹಾಕಿ ಒಟ್ಟಾರೆಯಾಗಿ 5500 ದರ ಕೊಡಬೇಕು, ಅಂದಾಗ ಮಾತ್ರ ಕಬ್ಬು ಬೆಳೆಗಾರರು ಉಳಿಯುತ್ತಾರೆ ಇಲ್ಲವಾದಲ್ಲಿ ದೀವಾಳಿ ಆಗುವುದರಲ್ಲಿ ಸಂಶಯವಿಲ್ಲ. ಪ್ರಸಕ್ತ ದಿನಮಾನಗಳಲ್ಲಿ ಕೃಷಿಯ ಖರ್ಚು 10 ಪಟ್ಟು ಹೆಚ್ಚಾಗಿದೆ, ಆದರೆ ಕಬ್ಬಿಗೆ ಸರಿಯಾದ ಬೆಲೆ ನೀಡದೇ ರಾಜ್ಯ ಹಾಗೂ ಕೇಂದ್ರ ಸರಕಾರಗಳು ರೈತರನ್ನು ಮೋಸ ಮಾಡುತ್ತಿದ್ದಾರೆ, ಕಾರ್ಖಾನೆ ಮಾಲಿಕರು ತೂಕದಲ್ಲಿ ಮೊಸ ಮಾಡುತ್ತಾ ಕಬ್ಬಿನ ಬಿಲ್ ಕೊಡುವಲ್ಲಿಯೂ ತಡ ಮಾಡಿ ರೈತರನ್ನು ಸತಾಯಿಸುತ್ತಾರೆ. ಆದ್ದರಿಂದ ಜಿಲ್ಲೆಯಲ್ಲಿ ಇನ್ನು ಕಬ್ಬು ತುಂಬಾ ಎಳೆಯದಿರುವುದ–ರಿಂದ ಇಳುವರಿ ಸಹ ಬರುವುದಿಲ್ಲ, ಇದ–ರಿಂದ ಎಲ್ಲರಿಗೂ ನ್ಷಟ ಆಗಲಿದೆ ಎಂದರು.

**ಪ್ರಸಕ್ತ ಸಾಲಿಗೆ ಕಾರ್ಖಾನೆ ಆರಂಭಿಸಲು ಅನುಮತಿ ನೀಡದಂತೆ ಜಿಲ್ಲಾಧಿಕಾರಿ ಗೆ ಸಂಗಮೇಶ ಸಗರ ಆಗ್ರಹ**

ಈ ವೇಳೆ ಕನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ ಕುಬಕಡ್ಡಿ,



ರಾಜ್ಯ ಉಪಾಧ್ಯಕ್ಷ ಕಲ್ಲು ಸೊನ್ನದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮನಗೌಡ ಪಾಟೀಲ, ಜಿಲ್ಲಾ ಉಪಾಧ್ಯಕ್ಷ ಮಹಾದೇವ ಬನಸೋಡೆ, ಸೊನ್ನದ, ಯಮನೇಶ ಮುಖಂಡರಾದ ಕಲ್ಲಪ್ಪ ಅಂಬರೇಶ ಭೈರಾಮಡಿ, ಭಜಂತ್ರಿ ಉಪಸ್ಥಿತರಿದ್ದರು.

# ಸವಿಜೇನಿನ ಉಡುಗೊರೆ ಕೊಡುವೆನು ನಾ ನಿನಗೆ..




ಜಯಶ್ರೀ ಜೆ ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ – ಮೊ:9449234142

■ ಉದಯರಶ್ಮಿ ದಿನಪತ್ರಿಕೆ

ನನ್ನೆದೆಯ ಪ್ರೀತಿ,

ನನ್ನ ಒಲವಿನ ದೇವತೆಯೇ , ನಿನ್ನ ಸೌಂದರ್ಯವನ್ನು ವರ್ಣಿಸಲು ಈ ಜಗದ ಪದಗಳು ಸಾಲುತ್ತಿಲ್ಲ. ನಿನ್ನ ಮುಖವು ಹುಣ್ಣಿಮೆಯ ಚಂದಿರನಂತೆ ಪ್ರಕಾಶಮಾನವಾಗಿ ಕಂಗೊಳಿಸುತ್ತದೆ; ಆ ಮುಖವನ್ನು ನೋಡಿದಾಗ ನನ್ನ ಅಂತರಂಗದ ಕತ್ತಲೆಯೆಲ್ಲಾ ಮಾಯವಾಗಿ ಹೊಸ ಬೆಳಕು ಮೂಡುತ್ತದೆ. ನಿನ್ನ ಕಣ್ಣುಗಳು ಶರತ್ಕಾಲದ ಸರೋವರದಲ್ಲಿ ಅರಳಿದ ಕಮಲದ ದಳಗಳಂತೆ ನಿಶ್ಚಲವೂ, ಆಳವೂ ಆಗಿವೆ. ಆ ಕಣ್ಣುಗಳ ಆಳಕ್ಕೆ ಇಳಿದಾಗ ನನಗೆ ಇಡೀ ವಿಶ್ವದ ರಹಸ್ಯಗಳೇ ತೆರೆದುಕೊಂಡಂತೆ ಭಾಸವಾಗುತ್ತದೆ. ನಿನ್ನ ಮಂದಹಾಸವು ಮುಂಜಾನೆಯ ಹುಲ್ಲಿನ ಮೇಲಿರುವ ಇಬ್ಬನಿಯ ಬಿಂದುವಿನಂತೆ ಅತ್ಯಂತ ಮುಗ್ಧವಾದುದು ಹಾಗೂ ಪವಿತ್ರವಾದುದು. ನೀನು ಮುಗುಳ್ನಕ್ಕಾಗ ಕಲ್ಲು ಬಂಡೆಯೂ ಕರಗಿ ನೀರಾಗುವಂತೆ ನನ್ನ ಹೃದಯ ನಿನ್ನ ಮೌನಕ್ಕೆ ಶರಣಾಗುತ್ತದೆ. ನಿನ್ನ ಕೇಶರಾಶಿಯು ಕಾರ್ಮೋಡದ ಸಾಲಿನಂತೆ ಕಪ್ಪು ಮತ್ತು ದಟ್ಟವಾಗಿದ್ದು, ನಿನ್ನ ಹೆಗಲ ಮೇಲೆ ಹರಡಿದಾಗ ರಾತ್ರಿಯ ಕತ್ತಲೆಯು ನಿನ್ನನ್ನು ಆವರಿಸಿದಂತೆ ಕಾಣುತ್ತದೆ. ನೀನು ನಡೆಯುವಾಗ ನಿನ್ನ ಕಾಲ್ಗೆಜ್ಜೆಯ ನಾದವು ಮಲ್ಹಾರ ರಾಗದ ಸುಂದರ ಲಯದಂತೆ ನನ್ನ ಕಿವಿಯಲ್ಲಿ ಸದಾ ಅನುರಣಿಸುತ್ತಿರುತ್ತದೆ.




ಪ್ರೀತಿಯ ಅನ್ವೇಷಣೆಯಲ್ಲಿ ಅಲೆದಾಡುತ್ತಿದ್ದ ಈ ಪ್ರಣವನ ಹೃದಯಕ್ಕೆ ನೀನು ಸಿಕ್ಕ ದಿನ, ನನ್ನ ಬದುಕಿನ ಶರತ್ಕಾಲವು ವಸಂತಕಾಲವಾಗಿ ಮಾರ್ಪಟ್ಟಿತು. ಪ್ರೀತಿ ಎನ್ನುವುದು ಕೇವಲ ಎರಡು ಹೃದಯಗಳ ಮಿಲನವಲ್ಲ; ಅದು ನಮ್ಮಿಬ್ಬರ ಆತ್ಮಗಳು ಒಂದೇ ಉಸಿರಿನಲ್ಲಿ ಬೆರೆಯುವ ದಿವ್ಯ ಕಾವ್ಯ. ನಿನ್ನನ್ನು ಕಂಡ ಕ್ಷಣದಿಂದ ನನ್ನ ಅಂತರಂಗದ ಮೌನ ಕವಿತೆಯಾಗಿ ಹೊರಹೊಮ್ಮುತ್ತಿದೆ. ನಿನ್ನ ಒಲವಿನ ಬೊಗಸೆಯಲ್ಲಿ ನನ್ನ ಇಡೀ ಜಗತ್ತನ್ನು ಮರೆತು ನಿಲ್ಲುವ ಆಸೆ ನನ್ನದು.

ನೆನಪಿದೆಯೇ ಪ್ರಣವಿ? ಆ ಒಂದು ಮುಸ್ಸಂಜೆಯ ವೇಳೆಯಲ್ಲಿ ದೇವಸ್ಥಾನದ ಆವರಣದ ಸಾಲಿನಲ್ಲಿ ನೀನು ನಿಂತಾಗ, ನಿನ್ನ ಹಣೆಯ ಮೇಲಿದ್ದ ಕೆಂಪು ಸಿಂಧೂರವು ಮುಳುಗುವ ಸೂರ್ಯನ ಕೊನೆಯ ಕಿರಣದಂತೆ ಹೊಳೆಯುತ್ತಿತ್ತು. ಘಂಟಾನಾದದ ಹಿನ್ನೆಲೆಯಲ್ಲಿ ನೀನು ಕಣ್ಣುಮುಚ್ಚಿ ಕೈಮುಗಿದಾಗ, ನಿನ್ನ ಮುಖದಲ್ಲಿ ಮೂಡಿದ ದೈವಿಕ ಕಳೆ ನನ್ನನ್ನು ಈ ಜಗದ ಮರ್ತ್ಯಲೋಕದಿಂದ ಮುಕ್ತಿಗೊಳಿಸಿ ದೇವಲೋಕಕ್ಕೆ ಕರೆದೊಯ್ದಂತಿತ್ತು. ಅಂದು ನಿನ್ನ ಮುಡಿಗೆ ನಾನು ಮುಡಿಸಿದ ಮಲ್ಲಿಗೆ ಹೂವಿನ ಸುಗಂಧ ಇಂದಿಗೂ ನನ್ನ ಉಸಿರಾಟದ ಪ್ರತಿ ಅಲೆಯಲ್ಲೂ ಜೀವಂತವಾಗಿದೆ.

ಮತ್ತೊಂದು ಮಧುರ ನೆನಪು ನಮ್ಮ ಕಾಲೇಜಿನ ಆ ಹಳೆಯ ಗ್ರಂಥಾಲಯದ್ದು. ಪುಸ್ತಕಗಳ ಸಾಲುಗಳ ಮಧ್ಯೆ ಯಾರಿಗೂ ತಿಳಿಯದಂತೆ ನಿನ್ನ ಕಣ್ಣುಗಳು ನನ್ನ ನೋಟವನ್ನು ಹುಡುಕುತ್ತಿದ್ದ ಆ ಕ್ಷಣಗಳು ಕೋಟಿ ಮೌಲ್ಯದ ಕಾವ್ಯಗಳು. ನೀನು ಓದುತ್ತಿದ್ದ ಪುಸ್ತಕದ ಪುಟಗಳ ನಡುವೆ ನಾನು ರಹಸ್ಯವಾಗಿ ಬಚ್ಚಿಟ್ಟಿದ್ದ ಆ ಒಣಗಿದ ಗುಲಾಬಿ ದಳ, ಇಂದಿಗೂ ನಮ್ಮ ಪ್ರೀತಿಯ ಮೊದಲ ಮೌನ ಒಪ್ಪಿಗೆಗೆ ಸಾಕ್ಷಿಯಾಗಿದೆ. ನಿನ್ನ ಬೆರಳಿನ ಉಗುರಿನಿಂದ ನೀನು ಬೆಂಚಿನ ಮೇಲೆ ಗೀಚುತ್ತಿದ್ದ ನನ್ನ ಹೆಸರಿನ ಅಕ್ಷರಗಳು, ಕಲ್ಲಿನ ಮೇಲೆ ಕೆತ್ತಿದ ಶಾಸನದಂತೆ ನನ್ನ ಅಂತರಂಗದಲ್ಲಿ ಅಚ್ಚೊತ್ತಿ ನಿಂತಿವೆ.

ನಿನ್ನ ಪ್ರೀತಿಯ ರಾಜನಾದ ಪ್ರಣವನ ವ್ಯಕ್ತಿತ್ವವೂ ಅಷ್ಟೇ ಆಕರ್ಷಕ ಮತ್ತು ದೃಢವಾದುದು. ಅವನ ಕಣ್ಣುಗಳಲ್ಲಿ ಮಿಂಚಿನಂತಹ ತೇಜಸ್ಸಿದೆ; ಆ ನೋಟದಲ್ಲಿ ಪ್ರೀತಿಯ ಆಳ ಹಾಗೂ ರಕ್ಷಣೆಯ ಭರವಸೆ ಎದ್ದು ಕಾಣುತ್ತದೆ. ಅವನ ವಿಶಾಲವಾದ ಹೆಗಲುಗಳು ದೃಢವಾದ ಕೋಟೆಯ ಗೋಡೆಯಂತೆ ಇದ್ದು, ನಿನ್ನನ್ನು ಜಗದ ಕಣ್ಣುಗಳಿಂದ ಕಾಯಲು ಸದಾ ಸಿದ್ಧವಾಗಿರುತ್ತವೆ. ಅವನ ನಗುವಿನಲ್ಲಿ ಮುಂಗಾರು ಮಳೆಯ ಮೊದಲ ಹನಿಯಂತೆ ತಂಪಾದ ಆಕರ್ಷಣೆಯಿದೆ. ನಿನ್ನ ಸೌಮ್ಯತೆಗೆ ಅವನು ದೃಢತೆಯ ಹೆಜ್ಜೆಯಾಗಿದ್ದಾನೆ. ಅವನಾಡುವ ಪ್ರತಿ ನುಡಿಯೂ ವೀರಗಾಸೆಯ ನಾದದಂತೆ ಗಂಭೀರವಾಗಿದ್ದರೂ, ನಿನ್ನ ಬಳಿ ಬಂದಾಗ ಅದು ವೇಣುಗಾನದಂತೆ ಮಧುರವಾದ ಪ್ರೇಮಗೀತೆಯಾಗಿ ಬದಲಾಗುತ್ತದೆ. ಅವನ ಇರುವಿಕೆಯೇ ನಿನ್ನ ಬದುಕಿಗೆ ಒಂದು ಶಿಸ್ತು ಮತ್ತು ಧೈರ್ಯದ ಕಿರೀಟವನ್ನು ಇಟ್ಟಂತೆ ಕಾಣುತ್ತದೆ. ಎಂದೆಲ್ಲ ನಿನ್ನ ಗೆಳತಿ ನಿನಗೆ ಹೇಳಿದ್ದನ್ನು ನೀನು ಹೆಮ್ಮೆಯಿಂದ ಹೇಳಿದ್ದನ್ನು ಮರೆಯಲಾದೀತೇ?

ನಮ್ಮ ನಡುವಿನ ಪ್ರೀತಿ ಕೇವಲ ಮಾತುಗಳಿಗೆ ಸೀಮಿತವಾಗಿಲ್ಲ. ನೀನು ದೂರವಿದ್ದಾಗಲೂ ನಿನ್ನ ಉಸಿರಿನ ಸುಗಂಧ ನನ್ನನ್ನು ಆವರಿಸಿರುತ್ತದೆ. ನಿನ್ನ



ನೆನಪುಗಳು ಕಡಲಿನ ಅಲೆಗಳಂತೆ ನಿರಂತರವಾಗಿ ನನ್ನ ಮನದ ದಡಕ್ಕೆ ಬಂದು ಅಪ್ಪಳಿಸುತ್ತವೆ. ನಾವು ಜೊತೆಯಾಗಿ ಕಳೆದ ಪ್ರತಿ ಕ್ಷಣವೂ ನನ್ನ ಪಾಲಿಗೆ ಯುಗಗಳಂತೆ ಶಾಶ್ವತ. ನನ್ನ ಹೃದಯದ ಬಡಿತವು ನಿನ್ನ ಹೆಸರನ್ನೇ ಜಪಿಸುತ್ತಿದೆ. ನಿನ್ನ ಕಣ್ಣಿನ ಒಂದು ಸಣ್ಣ ಕಣ್ಣೀರಿನ ಹನಿಯೂ ನನ್ನ ಅಂತರಂಗದಲ್ಲಿ ಬಿರುಗಾಳಿಯನ್ನು ಸೃಷ್ಟಿಸಬಲ್ಲದು. ನಿನ್ನ ಸಂತೋಷವೇ ನನ್ನ ಬದುಕಿನ ಏಕೈಕ ಆಶಯ ಮತ್ತು ಪ್ರಾರ್ಥನೆ.

ಆ ಸಾಂಸ್ಕೃತಿಕ ಕ್ಯಾಂಪಸ್‌ನ ಹಳೆಯ ಮರದ ನೆರಳಿನಲ್ಲಿ, ಸಂಜೆಯ ಸೂರ್ಯನು ಮುಳುಗುವಾಗ ನಮ್ಮ ಪ್ರಣಯದ ಕಾವ್ಯ ಆರಂಭವಾಗುತ್ತಿತ್ತು. ನೀನು ನಿನ್ನ ಸಾಂಪ್ರದಾಯಿಕ ರೇಷ್ಮೆ ಸೀರೆಯನ್ನು ಸರಿಪಡಿಸಿಕೊಳ್ಳುತ್ತಾ, ನಾಚಿಕೆಯಿಂದ ಕಣ್ಣುಗಳನ್ನು ಕೆಳಗೆ ಮಾಡಿದಾಗ ಇಡೀ ಪ್ರಕೃತಿಯೇ ಸ್ತಬ್ಧವಾದಂತೆ ಅನಿಸುತ್ತಿತ್ತು. ನಾನು ನಿನ್ನ ಹತ್ತಿರ ಬಂದು ನಿನ್ನ ತಣ್ಣನೆಯ ಕೈಗಳನ್ನು ನನ್ನ ಬೆಚ್ಚಗಿನ ಹಸ್ತದೊಳಗೆ ತೆಗೆದುಕೊಂಡಾಗ, ಇಬ್ಬರ ದೇಹದಲ್ಲೂ ವಿದ್ಯುತ್ ಸಂಚಾರದಂತೆ ರೋಮಾಂಚನ ಉಂಟಾಯಿತು..ನನ್ನ ಉಸಿರಿನ ಬಿಸಿಯು ನಿನ್ನ ಕೆನ್ನೆಯನ್ನು ಮುಟ್ಟಿದಾಗ, ನಿನ್ನ ಮುಖವು ಬೆಳಗ್ಗಿನ ಗುಲಾಬಿ ಹೂವಿನಂತೆ ಕೆಂಪಾಗುತ್ತಿತ್ತು. ಇಬ್ಬರ ಕಣ್ಣುಗಳು ಒಂದಾದಾಗ ಮಾತುಗಳು ಮರೆಯಾಗಿ ಮೌನವೇ ಸಂಭಾಷಣೆಯಾಗುತ್ತಿತ್ತು. ಕ್ಯಾಂಟೀನ್‌ನ ಆ ಸಣ್ಣ ಮೇಜಿನ ಮೇಲೆ ಹಂಚಿಕೊಂಡ ಕಾಫಿಯ ಕಹಿಯಲ್ಲೂ ನಿನ್ನ ಒಲವಿನ ಸಿಹಿ ತುಂಬಿತ್ತು. ಮಳೆಯ ಹನಿಗಳು ಧರೆಗೆ ಇಳಿಯುವಾಗ, ಒಂದೇ ಕೊಡೆಯಡಿಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ನಡೆಯುವಾಗ ಇಡೀ ಜಗತ್ತೇ ನನಗಾಗಿ ಮತ್ತು ನಿನಗಾಗಿ ಮಾತ್ರ ಸೃಷ್ಟಿಯಾಗಿದೆ ಎಂಬ ಭಾವನೆ ಮೂಡುತ್ತಿತ್ತು.

ನಮ್ಮ ಈ ದಿವ್ಯ ಪ್ರೀತಿ ನಾಲ್ಕು ಗೋಡೆಗಳ ಮಧ್ಯೆ ಮುಗಿಯುವ ಕಥೆಯಲ್ಲ; ಇದು ಜನ್ಮ ಜನ್ಮಾಂತರಗಳ ಅನುಬಂಧ. ಕಾಲಚಕ್ರ ಉರುಳಿದರೂ, ತಲೆಯ ಕೂದಲು ನರೆತರೂ ನಮ್ಮ ಒಲವಿನ ಹಸಿರು ಎಂದಿಗೂ ಬಾಡುವುದಿಲ್ಲ. ನೀನು ನನ್ನ ಬದುಕಿನ ಅರ್ಧಭಾಗವಲ್ಲ ಪ್ರಣವಿ, ನನ್ನ ಇಡೀ ಬದುಕಿನ ಉಸಿರು. ನಿನ್ನ ಹೆಜ್ಜೆಯಲ್ಲೇ ನನ್ನ ಹೆಜ್ಜೆಯನ್ನಿಟ್ಟು, ಈ ಜೀವನದ ಸುಂದರ ಪಯಣವನ್ನು ಕೊನೆಯವರೆಗೂ ಸಾಗಿಸುವ ದೃಢ ಸಂಕಲ್ಪ ನಿನ್ನ ಪ್ರಣವನದು. ನೀನೇ ನನ್ನ ಬಾಳ ಪ್ರೇಮ ದೇವತೆ, ಕೊನೆಯ ಉಸಿ–ರಿರುವವರೆಗೂ ನಿನ್ನನ್ನೇ ಪ್ರೀತಿಸುವೆ. ಹಾಡೊಂದು ತನ್ನ ರಾಗವನ್ನು ಹುಡುಕುವಂತೆ, ನನ್ನೀ ಜೀವ ದಿನವೂ ನಿನ್ನ ಪ್ರೀತಿಯನ್ನೇ ಹುಡುಕುತ್ತಿರುತ್ತದೆ. ಕಣ್ಣು ಮುಚ್ಚಿ ಮಲಗು ಗೆಳತಿ, ನಿನ್ನ ಕನಸುಗಳಿಗೆ ಕಾವಲು ಕಾಯಲು ನಾನಿರುತ್ತೇನೆ. ದಿನವೂ ನಿನ್ನ ಕನಸಲ್ಲಿ ನಿನ್ನ ರಾಜನಾಗಿ ನಗ್ನಕೋಟೆಯಲ್ಲಿ ನಿನ್ನಂದ ಚಂದ ಸೂರೆ ಮಾಡುವೆ. ನಿನ್ನನ್ನೂ ಪ್ರೀತಿಯ ಅಮಲಿನಲ್ಲಿ ತೇಲುವಂತೆ ಮಾಡುವೆ. ಯುಗ ಯುಗಾಂತರಕ್ಕೂ ನಿನ್ನದೇ ನೆರಳಾಗಿ, ಒಲವಿನ ಸವಿಜೇನಿನ ಸಿಹಿಮುತ್ತುಗಳ ಉಡುಗೊರೆ ಕೊಡುವೆನು ನಾ ನಿನಗೆ.. ಎಂದೆಂದಿಗೂ ನಿನ್ನವನೇ ಆದ, ಪ್ರಣವ್





# ಮತದಾರರ ಪಟ್ಟಿ ವಿವಾದ: ಇದು ಶುದ್ಧೀಕರಣವೇ? ಅನುಮಾನಗಳ ಸರಮಾಲೆಯೇ?

■ ಉದಯರಶ್ಮಿ ದಿನಪತ್ರಿಕೆ

ಚುನಾವಣೆ ಎಂದರೆ ಕೇವಲ ಮತದಾನದ ದಿನ ನಡೆಯುವ ಒಂದು ಪ್ರಕ್ರಿಯೆಯಲ್ಲ. ಅದರ ನಿಜವಾದ ಅಡಿಪಾಯವೇ ಮತದಾರರ ಪಟ್ಟಿ. ಆ ಪಟ್ಟಿಯಲ್ಲಿರುವ ಹೆಸರು ಸರಿಯಾಗಿದ್ದರೆ ಮಾತ್ರ ಪ್ರಜಾಪ್ರಭುತ್ವದ ಮತಕ್ಕೆ ಅರ್ಥ ಬರುತ್ತದೆ. ಹೀಗಿರುವಾಗ, ದೇಶದ ಚುನಾವಣಾ ಆಯೋಗದೊಳಗೇ ಭಿನ್ನಾಭಿಪ್ರಾಯಗಳಿವೆ ಎಂಬ ವರದಿ ಹೊರಬಂದರೆ ಸಹಜವಾಗಿಯೇ ಪ್ರಶ್ನೆಗಳು ಎದ್ದೇ ಎಳುತ್ತವೆ.

ಇತ್ತೀಚಿನ ವರದಿಯ ಪ್ರಕಾರ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಚುನಾವಣಾ ಆಯೋಗದಲ್ಲಿ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ





ಅವರು ಕಳೆದ ಹತ್ತು ತಿಂಗಳಲ್ಲಿ ಹಲವು ನಿರ್ಧಾರಗಳ ಬಗ್ಗೆ ಒಟ್ಟು 14 ಬಾರಿ ಲಿಖಿತ ಆಕ್ಷೇಪಣೆಗಳನ್ನು ದಾಖಲಿಸಿದ್ದಾರೆ ಎನ್ನಲಾಗಿದೆ. ಈಆಡಿಟ-6, ಮತದಾರರ ಹೆಸರು ಸೇರ್ಪಡೆ ತೆಗೆದುಹಾಕುವಿಕೆ, ಖಖಖ ಹಾಗೂ ಮತದಾರರ ಡೇಟಾಬೇಸ್ ನಿರ್ವಹಣೆ ಪ್ರಮುಖ ವಿಷಯಗಳಾಗಿವೆ.

ಇಲ್ಲಿ ಪ್ರಶ್ನೆ ಒಂದೇ, ಆಕ್ಷೇಪಣೆಗಳು ಏಕೆ ಬಂದವು?

ಹೊಸ ಮತದಾರರ ನೋಂದಣಿಗೆ ಬಳಸುವ ಈಆಡಿಟ-6ನಲ್ಲಿ ಹಿಂದಿನ ಖಖಖ ಪಟ್ಟಿಯಲ್ಲಿ ಅರ್ಜಿದಾರ, ಅವರ ತಂದೆ–ತಾಯಿ ಅಥವಾ ಅಜ್ಜ–ಅಜ್ಜಿಯವರ ಹೆಸರುಗಳಿದ್ದವೇ ಎಂಬ ಮಾಹಿತಿಯನ್ನು ಕೇಳುವ ಬದಲಾವಣೆಗೆ ಇಬ್ಬರು ಆಯುಕ್ತರು ಆಕ್ಷೇಪಿಸಿದ್ದಾರೆ ಎಂದು ವರದಿಯಾಗಿದೆ. ಇದನ್ನು ಕಾನೂನುಬದ್ಧತೆ, ಅನುಮತಿ ಮತ್ತು ಮೊದಲ ಬಾರಿಗೆ ಮತದಾರರಾಗುವ ಯುವಕರಿಗೆ ಉಂಟಾಗಬಹುದಾದ ತೊಂದರೆಗಳ ದೃಷ್ಟಿಯಿಂದ ಪ್ರಶ್ನಿಸಲಾಗಿದೆ.

ಮತ್ತೊಂದು ಗಂಭೀರ ಪ್ರಶ್ನೆ ಮತದಾರರ ಡೇಟಾಬೇಸ್ ಕುರಿತದ್ದು. ಕೆಲವು ಚುನಾವಣಾಧಿಕಾರಿಗಳಿಗೆ ಡೇಟಾಬೇಸ್ ವ್ಯವಸ್ಥೆಯಲ್ಲಿ ಬೇಕಾದಷ್ಟು ಪ್ರವೇಶವಿಲ್ಲ ಎಂಬ ಆಕ್ಷೇಪಣೆಗಳಿವೆ ಎನ್ನಲಾಗಿದೆ. ಮತ್ತೊಂದೆಡೆ, ಚುನಾವಣಾ ಆಯೋಗದ ವಾದವೇನೆಂದರ ಮತದಾರರ ರಾಷ್ಟ್ರೀಯ ಡೇಟಾವನ್ನು ಸೈಬರ್ ಭದ್ರತೆ ಮತ್ತು ಗೌಪ್ಯತೆಯ ಕಾರಣದಿಂದ ಕಟ್ಟುನಿಟ್ಟಿನನಿಯಂತ್ರಣದಲ್ಲಿಇಡುವುದುಅಗತ್ಯ.

ಇದರ ಮಧ್ಯೆ ಪ್ರತಿಪಕ್ಷಗಳು ನೇರವಾಗಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್

## ಆಯೋಗದೊಳಗೆ ಆಕ್ಷೇಪಣೆ, ಹೊರಗೆ ರಾಜೀನಾಮೆ ಕೂಗು: ವೋಟ್ ಲಿಸ್ಟ್‌ಗೆ ಯಾಕಿಷ್ಟು ಗದ್ದಲ?

ಕುಮಾರ್ ಅವರ ರಾಜೀನಾಮೆಗೆ ಒತ್ತಾಯಿಸುತ್ತಿವೆ. ಕಾಂಗ್ರೆಸ್ ಸೇರಿದಂತೆ ಕೆಲವು ಪ್ರತಿಪಕ್ಷ ನಾಯಕರು ಚುನಾವಣಾ ಆಯೋಗದ ಸ್ವಾಯತ್ತತೆ, ಖಖಖ ಪ್ರಕ್ರಿಯೆಯ ಪಾರದರ್ಶಕತೆ ಹಾಗೂ ಮತದಾರರ ಪಟ್ಟಿಯಿಂದ ಹೆಸರುಗಳ ತೆಗೆದುಹಾಕುವಿಕೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದ್ದಾರೆ. ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ತೆಗೆದುಹಾಕಬೇಕು ಎಂಬ ರಾಜಕೀಯ ಬೇಡಿಕೆಯೂ ಕೇಳಿಬಂದಿದೆ. ಆದರೆ ಈ ರಾಜೀನಾಮೆ ಬೇಡಿಕೆಯನ್ನು ರಾಜಕೀಯ ಪಕ್ಷಗಳ ಆರೋಪ ಮತ್ತು ಬೇಡಿಕೆಯೆಂದೇ ನೋಡಬೇಕು; ಅದರಿಂದಲೇ ತಪ್ಪು ಸಾಬೀತಾಗಿದೆ ಎಂದು ಹೇಳಲು ಸಾಧ್ಯವಿಲ್ಲ.

ಇನ್ನೊಂದು ಕಡೆ ಚುನಾವಣಾ ಆಯೋಗದ ಪ್ರತಿಕ್ರಿಯೆಯೂ ಗಮನಾರ್ಹ. ಆಯೋಗದ ಮೂಲಗಳ ಪ್ರಕಾರ, ಖಖಖ ಸೇರಿದಂತೆ ನಿರ್ಧಾರಗಳಿಗೆ ಮೂವರು ಚುನಾವಣಾ ಆಯುಕ್ತರ ಅನುಮೋದನೆ ಇತ್ತು. ಆಂತರಿಕವಾಗಿ ಅಧಿಕಾರಿಗಳು ಪ್ರಶ್ನೆ ಕೇಳುವುದು, ಅಭಿಪ್ರಾಯ ವ್ಯಕ್ತಪಡಿಸುವುದು ಆಡಳಿತಾತ್ಮಕ ಪ್ರಕ್ರಿಯೆಯ ಭಾಗವೇ ಹೊರತು ಅಂತಿಮ ನಿರ್ಧಾರವನ್ನು ಒಬ್ಬ ವ್ಯಕ್ತಿ ಏಕಪಕ್ಷೀಯವಾಗಿ ತೆಗೆದುಕೊಂಡಿದ್ದಾನೆ ಎಂಬುದಕ್ಕೆ ಅದು ಸಾಕ್ಷಿಯಲ್ಲ ಎಂದು ಆಯೋಗದ ನಿಲುವು.

ಇನ್ನು ಖಖಖ ಅನ್ನು ಸಂಪೂರ್ಣವಾಗಿ "ಅಕ್ರಮ" ಎಂದು ಕರೆಯುವುದಕ್ಕೂ ಕಾನೂನು ಹಿನ್ನೆಲೆ ಇದೆ. 2026ರ ಮೇನಲ್ಲಿ ಸುಪ್ರೀಂ ಕೋರ್ಟ್ ಬಿಹಾರದ ಖಖಖ ಪ್ರಕ್ರಿಯೆಯ ಕಾನೂನುಬದ್ಧತೆಯನ್ನು ಎತ್ತಿಹಿಡಿದು, ನಿಖರ ಮತ್ತು ವಿಶ್ವಾಸಾರ್ಹ ಮತದಾರರ ಪಟ್ಟಿಗಾಗಿ ಚುನಾವಣಾ ಆಯೋಗಕ್ಕೆ ಇಂತಹ ಪರಿಷ್ಕರಣೆ ನಡೆಸುವ ಅಧಿಕಾರವಿದೆ ಎಂದು ಹೇಳಿದೆ. ಆದರೆ ಇದರರ್ಥ ಪ್ರತಿ ಹೆಸರು ತೆಗೆದುಹಾಕುವ ಕ್ರಮವೂ ಪ್ರಶ್ನಾತೀತ ಎಂದು ಅಲ್ಲ; ಅರ್ಹ ಮತದಾರರನ್ನು ಹೊರಗಿಡದಂತೆ ಪರಿಶೀಲನೆ ಮತ್ತು ಮೇಲ್ಮನವಿ ವ್ಯವಸ್ಥೆ ಪರಿಣಾಮಕಾರಿಯಾಗಿರಬೇಕು.

ಹೀಗಾಗಿ "ವೋಟ್ ಚೋರಿ" ಎಂಬ ರಾಜಕೀಯ ಆರೋಪವನ್ನೂ, "ಇದು ಕೇವಲ ಮತದಾರರ ಪಟ್ಟಿ ಶುದ್ಧೀಕರಣ" ಎಂಬ ಅಧಿಕೃತ ವಾದವನ್ನೂ ಒಂದೇ ಕ್ಷಣದಲ್ಲಿ ಅಂತಿಮ ಸತ್ಯ ಎಂದು ಘೋಷಿಸುವುದು ಸರಿಯಲ್ಲ. ಹೆಸರು ತೆಗೆದುಹಾಕಲಾಗಿದೆ ಎಂಬುದು ಒಂದು ಸಂಗತಿ; ಉದ್ದೇಶ ಪೂರ್ವಕವಾಗಿ ನಿರ್ದಿಷ್ಟ ಪಕ್ಷಕ್ಕೆ ಲಾಭ ಮಾಡಿಸಲು ಮತ ಕದ್ದಿದ್ದಾರೆ ಎಂಬುದನ್ನು ಸಾಬೀತುಪಡಿಸುವುದು ಮತ್ತೊಂದು ಸಂಗತಿ.


ಕೊನೆಗೆ ಪ್ರಶ್ನೆ ಸಾಮಾನ್ಯ ಮತದಾರನದ್ದು. ನಿಮ್ಮ ಹೆಸರು ಪಟ್ಟಿಯಲ್ಲಿದೆಯೇ? ನಿಮ್ಮ ಮನೆಯ ವೃದ್ಧರ ಹೆಸರು ಇದೆಯೇ? ಹೆಸರು ತಪ್ಪಾಗಿ ಹೋಗಿದ್ದರೆ ಅದನ್ನು ಮರಳಿ ಸೇರಿಸಲು ಸರಳ ವ್ಯವಸ್ಥೆ ಇದೆಯೇ? ಎಷ್ಟು ಹೆಸರುಗಳು ಕೈಬಿಟ್ಟವು, ಎಷ್ಟು ಮರುಸೇರ್ಪಡೆಯಾದವು, ಎಷ್ಟು ಅರ್ಜಿಗಳು ತಿರಸ್ಕೃತವಾದವುಈ ಅಂಕಿ–ಅಂಶಗಳೇ ನಿಜವಾದ ಉತ್ತರ ಕೊಡಬೇಕು.

ಚುನಾವಣಾ ಆಯೋಗದ ಮೇಲೆ ಆರೋಪಗಳಿದ್ದರೆ ತನಿಖೆ ನಡೆಯಲಿ. ಆಯೋಗದ ಬಳಿ ಸ್ಪಷ್ಟನೆಗಳಿದ್ದರೆ ಅವು ದಾಖಲೆಗಳೊಂದಿಗೆ ಸಾರ್ವಜನಿಕವಾಗಲಿ. ಪ್ರತಿಪಕ್ಷಗಳು ಜ್ಞಾನೇಶ್ ಕುಮಾರ್ ರಾಜೀನಾಮೆ ಕೇಳುತ್ತಿದ್ದರೆ, ಆ ಬೇಡಿಕೆಯ ಹಿಂದಿರುವ ಸಾಕ್ಷ್ಯಗಳನ್ನು ದೇಶದ ಮುಂದೆ ಇಡಲಿ. ಆಯೋಗವೂ ತನ್ನ ನಿರ್ಧಾರಗಳ ಪ್ರಕ್ರಿಯೆಯನ್ನು ಸಾಧ್ಯವಾದಷ್ಟು ಪಾರದರ್ಶಕವಾಗಿ ವಿವರಿಸಲಿ.

ಯಾಕೆಂದರೆ ಚುನಾವಣೆಯ ಅಂಪೈರ್ ಮೇಲೆ ನಂಬಿಕೆ ಇರಬೇಕು ಎಂಬುದು ಪಕ್ಷಗಳ ಅಗತ್ಯವಲ್ಲ ಅದು ಮತದಾರರ ಹಕ್ಕು. ಅನುಮಾನ ಉಳಿಯದಂತೆ ಮಾಡುವುದು ಚುನಾವಣಾ ಆಯೋಗದ ಜವಾಬ್ದಾರಿ; ಅನುಮಾನವನ್ನು ಸಾಕ್ಷ್ಯವಿಲ್ಲದೆ ತೀರ್ಪಾಗಿ ಪರಿವರ್ತಿಸದಿರುವುದು ಸಾರ್ವಜನಿಕ ಚರ್ಚೆಯ ಜವಾಬ್ದಾರಿ.




ಆಕಾಶ ರೋಡಗಿ.
ಶಿವೂರ - ಅಫಜಲಪುರ
ಕಲಬುರ್ಗಿ ಜಿಲ್ಲೆ






# ಸಿಂದಗಿಯಲ್ಲಿರುವ ವೀರಸೌಧ ಅಭಿವೃದ್ಧಿಗೆ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಹೈದ್ರಾಬಾದ್ ವಿಮೋಚನಾ ಚಳುವಳಿ ಪಿತಾಮಹ ರಾಷ್ಟ್ರವೀರ ಸ್ವಾಮಿ ರಾಮಾನಂದ ತೀರ್ಥರ ಜನ್ಮದಿನವಾದ ಅಕ್ಟೋಬರ್ 3 ರಂದು ರಾಜ್ಯಾದ್ಯಂತ ಎಲ್ಲ ಶಾಲಾ ಕಾಲೇಜು ಹಾಗೂ ಸರಕಾರಿ ಕಚೇರಿಗಳಲ್ಲಿ ಸರಕಾರದಿಂದ ಜಯಂತಿ ಆಚರಣೆ ಮಾಡಲು ಆಗ್ರಹಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ ಅವರ ಮೂಲಕ ಸರ್ಕಾರಕ್ಕೆ ವಿಜಯಪುರ ಜಿಲ್ಲಾ ಸಂಘ –ಸಂಸ್ಥೆಗಳ ಮುಖಂಡರು ಮನವಿ ಸಲ್ಲಿಸಿ ಆಗ್ರಹಿಸಿದರು.

ಈ ಸಂದರ್ಭದಲ್ಲಿ ವಿಜಯಪುರ ಜಿಲ್ಲಾ 371ಜೆ ಹೋರಾಟಗಾರರಾದ ಲಾಯಪ್ಪ ಇಂಗಳೆ ಮಾತನಾಡಿ, ಅಖಂಡ ಹೈದ್ರಾಬಾದ್ ಪ್ರಾಂತವು ಭಾರತದ ಒಕ್ಕೂಟದಲ್ಲಿ ಇಂದು ಸೇರಿದೆ ಅಂ–ದರೆ ಅದಕ್ಕೆ ಸ್ವಾಮಿ ರಾಮಾನಂದ ತೀರ್ಥರವರೇ ಕಾರಣಿಪುರುಷರಾಗಿದ್ದಾರೆ ಸಿಂದಗಿಯಲ್ಲಿರುವ ಅವರ ಜನ್ಮ ಸ್ಮಾರಕ ವೀರಸೌಧವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅಭಿವೃದ್ಧಿ ಪಡಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಂಘ ಸಂಸ್ಥೆಗಳ ಮುಖಂಡರಾದ ವಿನೋದ ಖೇಡ, ಸಿದ್ದನಗೌಡ ಪಾಟೀಲ, ಎನ್. ಸುರೇಶಕುಮಾರ, ಅನಿಲ ಇಕ್ಕಡೆ, ಜಗದೇವ ಸೂರ್ಯವಂಶಿ, ಮಲ್ಲನಗೌಡ ಪಾಟೀಲ (ಬರಟಗಿ ), ಪ್ರದೀಪ ದೇಶಪಾಂಡೆ, ಕಲ್ಲಪ್ಪ ಶಿವಶರಣ, ಅಯೂಬಖಾನ ನದಾಫ್, ಮೊಹ್ಮದ್ ಬಾಗವಾನ, ಎಂ ಎಂ ಹಂಗರಗಿ, ಸಂಗನಗೌಡ ಪಾಟೀಲ ಸೇರಿದಂತೆ ಹಲವರಿದ್ದರು.



# (ಕೊರಳ್ಳಿ) ಎನ್.ಎನ್.ತಾಂಡಾದ ವಸತಿ ಶಾಲೆಯವಿದ್ಯಾರ್ಥಿನಿಯರು ವಿಭಾಗಮಟ್ಟಕ್ಕೆ ಆಯ್ಕೆ

ಕಲಬುರಗಿ : ಆಳಂದ ತಾಲೂಕಿನ (ಕೊರಳ್ಳಿ) ಎನ್.ಎನ್.ತಾಂಡಾದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿಯರು 2026–27ನೇ ಶೈಕ್ಷಣಿಕ ಸಾಲಿನಲ್ಲಿ ಕಲಬುರಗಿ ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ದಿನಾಂಕ: 22–09–2026ರಂದು ಜರುಗಿದ ಜಿಲ್ಲಾ ಮಟ್ಟದ ಬಾಲಕಿಯರ ಪ್ರೌಢ ವಿಭಾಗದ ವಾಲಿಬಾಲ್ ಕ್ರೀಡೆಯಲ್ಲಿ ಭಾಗವಹಿಸಿ, ಪ್ರಥಮ ಸ್ಥಾನ ಪಡೆದು ಸತತವಾಗಿ ಎರಡನೇ ಬಾರಿಗೆ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಈ ವಸತಿ ಶಾಲೆಯ ವಿದ್ಯಾರ್ಥಿನಿಯರ ಸಾಧನೆಗಾಗಿ ಕಲಬುರಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರೀತಿ ಚಂದ್ರಶೇಖರ ದೊಡ್ಡಮನಿ ಅವರು ಮೆಚ್ಚುಗೆ ವ್ಯಕ್ತಪಡಿಸಿ ಪ್ರಶಂಶಿಸಿದ್ದಾರೆ. ಅದೇ ರೀತಿ ಈ ವಿದ್ಯಾರ್ಥಿಗಳ ಸಾಧನೆಗಾಗಿ ಈ ವಸತಿ ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ ಜಿ ಕಡಗಂಚಿ ಹಾಗೂ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

# ಈಜು ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ

ಕಲಬುರಗಿ:ಇತ್ತಿಚೆಗೆ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಈಜು ಕೊಳದಲ್ಲಿ ನಡೆದ ಜಿಲ್ಲಾ ಮಟ್ಟದ ನೇರ ಆಯ್ಕೆ ಈಜು ಸ್ಪರ್ಧೆಗಳಲ್ಲಿ ಶರಣಬಸವೇಶ್ವರ ವಸತಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ವಿವಿಧ ಈಜು ಸ್ಪರ್ಧೆಗಳಲ್ಲಿ ಭಾಗವಹಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳು ಪ್ರಾಥಮಿಕ ವಿಭಾಗ–ಚನ್ನಬಸವಣ್ಣ ಪಾಟೀಲ್ ಮತ್ತು ಅರ್ಪಿತಾ ಕೆ. ಅದೇ ರೀತಿಯಾಗಿ ಪ್ರೌಢ ಶಾಲಾ ವಿಭಾಗದ–ಸಾನ್ವಿ ಜೆ. ಮತ್ತು ಅದಿತಿ ಕೆ. ಈ ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ಎಲ್ಲಾ ವಿದ್ಯಾರ್ಥಿಗಳಿಗೆ ಶಿಕ್ಷಕ ವೃದದವರು ಹಾಗೂ ಶಾಲಾ ಸಿಬ್ಬಂಧಿಗಳು ಶುಭ ಹಾರೈಸಿದರು. ಈ ಎಲ್ಲಾ ವಿದ್ಯಾರ್ಥಿಗಳಿಗೆ ಸಂಸ್ಥೆಯ 9ನೇ ಪೀಠಾಧಿಪತಿ ಪೂಜ್ಯ ಚಿ. ದೊಡ್ಡಪ್ಪ ಅಪ್ಪ ಅವರು, ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಪೂಜ್ಯ ಮಾತೋಶ್ರೀ ಡಾ. ದಾಕ್ಷಾಯಣಿ ಅವ್ವಾಜಿ ಹಾಗೂ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ. ಬಸವರಾಜ ದೇಶಮುಖ ಹಾಗೂ ಪ್ರಾಚಾರ್ಯರಾದ ಶ್ರೀ. ಎನ್.ಎಸ್. ದೇವರಕಲ್ ಅವರು ಈ ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

### ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಘದ ಅಧ್ಯಕ್ಷ ಮತ್ತು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಹೇಳಿಕೆ

# ಬಿ.ಎಲ್.ಡಿ ಸೌಹಾರ್ದ ಸಂಘಕ್ಕೆ ರೂ.7.17 ಕೋಟಿ ನಿವ್ವಳ ಲಾಭ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಶಿಸ್ತುಬದ್ಧ ಆರ್ಥಿಕ ಕ್ರಮಗಳಿಂದಾಗಿ ಬಿಜಾಪುರ ಲಿಂಗಾಯತ ಡೆವಲಪ್‌ಮೆಂಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ(ಬಿ.ಎಲ್.ಡಿ ಸೌಹಾರ್ದ) ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದು ಸಂಘದ ಅಧ್ಯಕ್ಷ ಮತ್ತು ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ಶುಕ್ರವಾರ ನಗರದಲ್ಲಿ ಬಿ.ಎಲ್.ಡಿ ಸೌಹಾರ್ದದ 4ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.

2025– 26ನೇ ಆರ್ಥಿಕ ವರ್ಷದಲ್ಲಿ ಸಂಘ ಆರ್ಥಿಕವಾಗಿ ಗಮನಾರ್ಹ ಸಾಧನೆ ಮಾಡಿದ್ದು, ಒಟ್ಟು ವ್ಯವಹಾರ 760 ಕೋಟಿ ತಲುಪಿದೆ.ಅಲ್ಲದೇ,ರೂ.7.17ಕೋಟಿನಿವ್ವಳ ಲಾಭ ಗಳಿಸಿದೆ. ಬ್ಯಾಂಕಿನ ಸದೃಢತೆಗೆ ಇದು ಸಾಕ್ಷಿಯಾಗಿದ್ದು, ಸದಸ್ಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ಬಾರಿ ಶೇ. 5 ರಷ್ಟು ಲಾಭಾಂಶ(ಡಿವಿಡೆಂಡ್) ನೀಡಲಾಗುತ್ತಿದೆ. ಈ ಯಶಸ್ಸಿಗೆ ಸಂಘದ ಗ್ರಾಹಕರು, ಸದಸ್ಯರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗ ಕಾರಣವಾಗಿದೆ. ಮುಂಬರುವ ದಿನಗಳಲ್ಲಿ ಸದಸ್ಯರಿಗೆ ಇನ್ನಷ್ಟು ಉತ್ತಮ ಸಹಕಾರಿ ಸೇವೆಗಳನ್ನು ಒದಗಿಸುವುದು. ಠೇವಣಿ ಮತ್ತು ಸಾಲ ವ್ಯವಹಾರಗಳನ್ನು ವಿಸ್ತರಿಸುವುದು ಹಾಗೂ ಸಂಘವನ್ನು ಮತ್ತಷ್ಟು ಬಲಿಷ್ಠಗೊಳಿಸುವ ಉದ್ದೇಶವನ್ನು ಹೊಂದಲಾಗಿದೆ ಎಂದು ಅವರು ತಿಳಿಸಿದರು.


ಸಾನಿಧ್ಯ ವಹಿಸಿದ್ದ ಷಣ್ಮುಖಾರೂಢ ಮಠದ ಪೀಠಾಧ್ಯಕ್ಷ ಶ್ರೀ ಅಭಿನವ ಸಿದ್ಧಾರೂಢ ಮಹಾಸ್ವಾಮಿಗಳು ಮಾತನಾಡಿ, ವಚನಪಿತಾಮಹ ಡಾ. ಫ. ಗು. ಹಳಕಟ್ಟಿ ಅವರು ಸ್ಥಾಪಿಸಿದ ಬಿ.ಎಲ್.ಡಿ.ಇ ಸಂಸ್ಥೆಯನನು ಸಂಗನಬಸವ ಸ್ವಾಮೀಜಿ, ಬಂಗಾರಮ್ಮ ಸಜ್ಜನ, ಬಿ. ಎಂ. ಪಾಟೀಲ ಅವರ ಕಟ್ಟಿ ಬೆಳೆಸಿದ್ದಾರೆ. ಈಗ ಎಂ. ಬಿ. ಪಾಟೀಲ ಅವರು ಸಮರ್ಥವಾಗಿ ಮುನ್ನಡೆಸುತ್ತಿದ್ದು, ಶತಮಾನದ ಹಿಂದೆ ಪ್ರಾರಂಭವಾದ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ಉತ್ತರ ಕರ್ನಾಟಕದಲ್ಲಿ ಶೈಕ್ಷಣಿಕ, ಆರೋಗ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದೆ ಎಂದು ಹೇಳಿದರು.



ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಶರಣಬಸಪ್ಪ ಡಿ. ಗುಡ್ಡೊಡಗಿ, ನಿರ್ದೇಶಕ ಶ್ರೀಕಾಂತ ಎಸ್. ಶಿರಾಡೋಣ, ಅವಿನಾಶ ಬಿ. ಜೈನ, ವಿಜಯಕುಮಾರ ಡಿ. ಕನಮಡಿ, ಗಿರೇಪ್ಪ ಡಿ. ಗುಗ್ಗರಿ, ಪ್ರಭುಗೌಡ ಬಸನಗೌಡ ಬಿರಾದಾರ, ಸಂತೋಷ ಬಸಲಿಂಗಪ್ಪ ಹೊಕ್ರಾಣಿ, ಸೋಮನಾಥ ಗೊಲಪ್ಪ ಕಳ್ಳಿಮನಿ, ಪ್ರೊ. ರಾಜು ಆಲಗೂರ, ಆಲಗೂರ, ಮಲ್ಲಪ್ಪ ಪಿ. ಕವಲಗಿ, ಮುಖ್ಯ ಕಾರ್ಯ ನಿರ್ಹವಣಾಧಿಕಾರಿ ವಿಜಯಕುಮಾರ ಜತ್ತಿ ಮುಂತಾದವರು ಉಪಸ್ಥಿತರಿದ್ದರು.

# ಎನ್‌ಎಸ್‌ಎಸ್‌ದಿಂದ ಸೇವಾ ಮನೋಭಾವನೆ

ಕಲಬುರಗಿ : ಎನ್‌ಎಸ್‌ಎಸ್ ಶಿಬಿರವು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವವನ್ನು ಬೆಳೆಸುತ್ತದೆ ಎಂದು ಗೋದುತಾಯಿ ದೊಡ್ಡಪ್ಪ ಅಪ್ಪ ಪದವಿ ಮಹಿಳಾ ಮಹಾವಿದ್ಯಾಲಯದ ಪ್ರಾಧ್ಯಾಪಕಿ ಡಾ.ಪುಟ್ಟಮಣಿ ದೇವಿದಾಸ ಹೇಳಿದರು.




ನಗರದ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಗುರುವಾರ ಎನ್‌ಎಸ್‌ಎಸ್ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಮಹಾತ್ಮ ಗಾಂಧೀಜಿಯವರ ಕನಸಿನಂತೆ ಅವರ ಜನ್ಮ ಶತಮಾನೋತ್ಸವದ ವರ್ಷ 1969ರ ಸೆಪ್ಟೆಂಬರ 24 ರಂದು ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಸ್ಥಾಪನೆಯಾಯಿತು. ವಿದ್ಯಾರ್ಥಿಗಳು ಮತ್ತು ಯುವಕರು ತರಗತಿಗಳಿಗೆ ಮಾತ್ರ ಸೀಮಿತವಾಗದೆ, ಸಮುದಾಯದೊಂದಿಗೆ ಬೆರೆತು ಗ್ರಾಮೀಣ ಅಭಿವೃದ್ಧಿ ಹಾಗೂ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕೆಂಬುದುವುದೆ ಇದರ ಉದ್ದೇಶವಾಗಿದೆ. 'ನಾನಲ್ಲ ನೀನು' ಎಂಬ ಧ್ಯೇಯವಾಕ್ಯವಾಗಿದ್ದು, ಇದು ಸ್ವಾರ್ಥರಹಿತ ಸೇವೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಎತ್ತಿ ಹಿಡಿಯುತ್ತದೆ. ಶಿಸ್ತು, ನಾಯಕತ್ವ ಮತ್ತು ಸಾಮಾಜಿ–ಕ ಜವಾಬ್ದಾರಿಯನ್ನು ಬೆಳೆಸುವುದು ಇದರ ಮುಖ್ಯ ಆಶಯವಾಗಿದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಸಹಪ್ರಾಚಾರ್ಯ ಡಾ.ಶಿವರಾಜ ಶಾಸ್ತ್ರಿ ಹೇರೂರ್ ಮಾತನಾಡಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಮಾಡುವ ದೊಡ್ಡ ವೇದಿಕೆಯಾಗಿದೆ. ಇಂದಿನ ಯುವಜನತೆ ದೇಶದ ದೊಡ್ಡ ಶಕ್ತಿಯಾಗಿದೆ. ಯುವಕರಲ್ಲಿ ಜ್ಞಾನ, ಕೌಶಲ್ಯ, ಶಿಸ್ತು ಮತ್ತು ಸೇವಾ ಮನೋಭಾವ ಬೆಳೆದರೆ ದೇಶದ ಅಭಿವೃದ್ಧಿ ಇನ್ನಷ್ಟು ವೇಗವಾಗಿ ಸಾಧ್ಯವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನೂ ನಿರ್ವಹಿಸಬೇಕು ಎಂದು ತಿಳಿಸಿದರು.

ವೇದಿಕೆ ಮೇಲೆ ಐಕ್ಯೂಎಸಿ ಸಂಯೋಜಕಿ ಡಾ.ಆರತಿ ರಾಮಚಂದ್ರ ಇದ್ದರು. ಕಾಲೇಜಿನ ಎನ್–ಎಸ್‌ಎಸ್‌ಅಧಿಕಾರಿ ಡಾ.ವಿಜಯಲಕ್ಷ್ಮೀ ಪ್ರಾಸ್ತಾವಿಕ ಮಾತನಾಡಿದರು. ಕು.ಸುವರ್ಣ ನಿರೂಪಿಸಿದರೆ, ಕು.ಪೈಜಾಖಾನಂ ವಂದಿಸಿದರು. ಮಹಾವಿದ್ಯಾಲಯದ ಎಲ್ಲಾ ಬೋಧಕ, ಬೋಧಕೇತರರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಪ್ರಾಪ್ತ ವಯಸ್ಸಿನ ಪ್ರೀತಿ ಬೇಡ, ಭವಿಷ್ಯದ ಸಾಧನೆ ಮುಖ್ಯ:ಮಂಜುಳಾ ಪಾಟೀಲ್

ಕಲಬುರಗಿ : ಇಂದಿನ ದಿನಗಳಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳು ಪ್ರೀತಿ–ಪ್ರೇಮದ ಹೆಸರಿನಲ್ಲಿ ತಪ್ಪು ನಿರ್ಧಾರಗಳನ್ನು ಕೈಗೊಂಡು ಕಾನೂನು ಸಮಸ್ಯೆಗಳಿಗೆ ಸಿಲುಕುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು, ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಬಗ್ಗೆ ಸ್ಪಷ್ಟ ಗುರಿ ಹೊಂದಿ ಶಿಕ್ಷಣದತ್ತ ಗಮನ ಹ–ರಿಸಬೇಕು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಂಜುಳಾ ವಿ. ಪಾಟೀಲ್ ಹೇಳಿದರು.

ಅವರು ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಎಂ ಎಸ್ ಇರಾಣಿ ಪದವಿಪೂರ್ವ ಕಾಲೇಜಿನ ಸಂಂ–ಯುಕ್ತ ಆಶ್ರಯದಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಾಲಾ ಶಿಕ್ಷಣ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ–1098/112, ಪೊಲೀಸ್ ಇಲಾಖೆ, ಸ್ವಯಂಸೇವಾ ಸಂಸ್ಥೆಗಳು ಆಯೋಜಿಸಲಾಗಿದ್ದ ಪೋಕ್ಸೊ ಕಾಯ್ದೆ ಮತ್ತು ಬಾಲ್ಯ ವಿವಾಹ ನಿಷೇದ ಕಾಯ್ದೆ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

16 ಮತ್ತು 17 ವರ್ಷದ ಬಾಲಕಿಯರು ಪ್ರೀತಿ–ಪ್ರೇಮದಂತಹ ವಿಚಾರಗಳಿಗೆ ಒಳಗಾಗಿ ಬಾಲಗರ್ಭಿಣಿಯರಾಗುವ ಪ್ರಕರಣಗಳು ಕಂಡುಬರುತ್ತಿವೆ. ಇಂತಹ ಪ್ರಕರಣಗಳಲ್ಲಿ ಪೋಕ್ಸೋ ಕಾಯ್ದೆ ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆಯಡಿ ಯುವಕರು ಕಾನೂನು ಕ್ರಮ ಎದುರಿಸುವ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಕಾನೂನುಗಳ ಅರಿವು ಹೊಂದುವುದರ ಜೊತೆಗೆ ತಮ್ಮ ಶಿಕ್ಷಣ, ಗುರಿ ಮತ್ತು ಭವಿಷ್ಯದ ನಿರ್ಮಾಣಕ್ಕೆ ಆದ್ಯತೆ ನೀಡಬೇಕು ಎಂದು ಅವರು ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ವಿಶ್ವಾರಾಧ್ಯ ಇಜೇರಿ ಮಾತನಾಡಿ, ಸಂಕಷ್ಟದಲ್ಲಿರುವ ಹಾಗೂ ರಕ್ಷಣೆ ಮತ್ತು ಪೋಷಣೆಯ ಅಗತ್ಯವಿರುವ ಮಕ್ಕಳಿಗೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮೂಲಕ ಸೂಕ್ತ ರಕ್ಷಣೆ ಮತ್ತು ಪುನರ್ವಸತಿ ಕಲ್ಪಿಸಲಾಗುತ್ತದೆ. ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಗೆ ಸಂಬಂಧಿಸಿದಂತೆ ಸಮಿತಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಾರ್ಗದರ್ಶಿ ಸಂಸ್ಥೆಯ ನಿರ್ದೇಶಕ ಆನಂದರಾಜ್ ಅವರು ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು. ಬಾಲ್ಯವಿವಾಹವು ಶಿಕ್ಷಾರ್ಹ ಅಪರಾಧವಾಗಿದ್ದು, ಬಾಲ್ಯವಿವಾಹಕ್ಕೆ ಕಾರಣವಾಗುವ ರೀತಿಯ ನಿಶ್ಚಿತಾರ್ಥವೂ ಕಾನೂನುಬದ್ಧವಾಗಿ ಸಮಸ್ಯೆಗಳಿಗೆ ಕಾರಣವಾಗಬಹುದು. ಹೀಗಾಗಿ ವಿದ್ಯಾರ್ಥಿಗಳು ಬಾಲ್ಯವಿವಾಹದ ವಿರುದ್ಧ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಹೇಳಿದರು.



# ವೃಕ್ಷಥಾನ್ ಪ್ರಮೋಷನ್ & ನೋಂದಣಿ ಜಾಗೃತಿ ಅಭಿಯಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವೃಕ್ಷ ಅಭಿಯಾನ ಪ್ರತಿಷ್ಠಾನದ ಅಂಗವಾಗಿ ಐತಿಹಾಸಿಕ ವಿಜ ಯಪುರ ನಗರದಲ್ಲಿ ಡಿಸೆಂಬರ್ 13ರಂದು ನಡೆಯಲಿರುವ 7ನೇ ಆವೃತ್ತಿಯ ವೃಕ್ಷಥಾನ್ ಹೆರಿಟೇಜ್ ರನ್ ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಬೆಂಗಳೂರಿನಲ್ಲಿ ವಿಜಯಪುರ ಸೈಕ್ಲಿಂಗ್ ಗ್ರುಪ್ ಮತ್ತು ವೃಕ್ಷಥಾನ್ ಹೆರಿಟೇಜ್ ರನ್ ಸಮಿತಿ ಸದಸ್ಯರು ಪ್ರಮೋಷನ್ ಹಾಗೂ ನೋಂದಣಿ ಜಾಗೃತಿ ಅಭಿಯಾನ ನಡೆಸಿದರು. ಬೆಂಗಳೂರು ಜಿಕೆವಿಕೆ ಕ್ಯಾಂಪಸ್, ಕಬ್ಬನ್ ಪಾರ್ಕ್, ಶಾಂಕಿ ಟ್ಯಾಂಕ್ ಏರಿಯಾ ಮತ್ತು ಆಡುಗೋಡಿ ಪೊಲೀಸ್ ಮೈದಾನದಲ್ಲಿ ವಿಸಿಜಿ ತಂಡ ಮತ್ತು ವೃಕ್ಷಥಾನ್ ಸಮಿತಿ ಸದಸ್ಯರು ಸ್ಥಳೀಯರನ್ನು ಭೇಟಿ ಮಾಡಿ, ವಿಜಯಪುರ ವೃಕ್ಷಥಾನ್ ಹೆರಿಟೇಜ್ ರನ್ ಕುರಿತು ಮಾಹಿತಿ ನೀಡಿ, ವಿಜಯಪುರದಲ್ಲಿ ನಡೆಯುವ ಈ ಓಟದಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಿದರು. ಈ ಜಾಗೃತಿ ಅಭಿಯಾನಕ್ಕೆ ಸ್ಥಳೀಯರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಬೆಂಗಳೂರು ಭಾಗದಿಂದ ಹೆಚ್ಚಿನ ಸಂಖ್ಯೆಯ ಓಟಗಾರರು ಈ ಬಾರಿ ಭಾಗವಹಿಸುತ್ತಾರೆಂಬ ಭರವಸೆ ಇದೆ ಎಂದು ವೃಕ್ಷಥಾನ್ ರನ್ ಸಮಿತಿ ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ.

## ವಿಜಯಪುರದಲ್ಲಿ ಏಕ್ ಪೇಡ್ ಮಾ ಕೆ ನಾಮ್ ಹಾಗೂ ಒನ್ ಕೆಡೆಟ್ ಒನ್ ಟ್ರೀ ಅಭಿಯಾನಕ್ಕೆ ಕರೆ

# ಪ್ರತಿಯೊಬ್ಬರು ಒಂದು ಗಿಡ ನೆಟ್ಟು ಪೋಷಿಸಿ :ಕರ್ನಲ್ ವಂಶಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಎನ್‌ಸಿಸಿ ಕೆಡೆಟ್ ಸೇರಿದಂತೆ ಪ್ರತಿಯೊಬ್ಬರು ಸೂಕ್ತ ಸ್ಥಳದಲ್ಲಿ ಕನಿಷ್ಠ ಒಂದು ಗಿಡ ನೆಟ್ಟು, ಅದನ್ನು ಪೋಷಿಸುವ ಮೂಲಕ ಪರಿಸರ ಸಂರಕ್ಷಣೆಗೆ ಕೊಡುಗೆ ನೀಡಬೇಕು ಎಂದು 36 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಕಮಾಂಡಿಂಗ್ ಆಫೀಸರ್ ಕರ್ನಲ್ ಬಿ.ಕೆ.ಕೆ. ವಂಶಿ ಕರೆ ನೀಡಿದರು.

ನಗರದ ಎ.ಎಸ್. ಪಾಟೀಲ ವಾಣಿಜ್ಯ ಮಹಾವಿದ್ಯಾಲಯದ ಆವರಣದಲ್ಲಿ ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ ಹಾಗೂ ಎ.ಎಸ್. ಪಾಟೀಲ ವಾಣಿಜ್ಯ ಮಹಾವಿದ್ಯಾಲಯದ ಎನ್‌ಸಿಸಿ ಘಟಕ, 36 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಏಕ್ ಪೇಡ್ ಮಾ ಕೆ ನಾಮ್ ಹಾಗೂ ಒನ್ ಕೆಡೆಟ್ ಒನ್ ಟ್ರೀ ಸಸಿ ನೆಡುವ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡು ಮಾತನಾಡಿದರು.

ಒನ್ ಕೆಡೆಟ್ ಒನ್ ಟ್ರೀ' ಅಭಿಯಾನವು ಪರಿಸರ ಜಾಗೃತಿ ಮೂಡಿಸುವುದರ ಜೊತೆಗೆ ಗಿಡ ನೆಟ್ಟು ಪೋಷಿಸುವ ಜವಾಬ್ದಾರಿಯನ್ನು ಕೆಡೆಟ್‌ಗಳಲ್ಲಿ ಬೆಳೆಸುವ ಉದ್ದೇಶ ಹೊಂದಿದೆ.

ಎನ್‌ಸಿಸಿ ಮೂಲಕ ಶಿಸ್ತು, ನಾಯಕತ್ವ, ಸಾಮಾಜಿ-ಕ ಹೊಣೆಗಾರಿಕೆ ಹಾಗೂ ಪರಿಸರ ಜಾಗೃತಿಯನ್ನು ಬೆಳೆಸಲಾಗುತ್ತಿದ್ದು, ವಿವಿಧ ತರಬೇತಿ, ಸಮುದಾಯ ಸೇವೆ ಮತ್ತು ಸಾಮಾಜಿಕ ಜಾಗೃತಿ ಚಟುವಟಿಕೆಗಳಲ್ಲೂ ಕೆಡೆಟ್‌ಗಳು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಕರ್ನಲ್ ವಂಶಿ ತಿಳಿಸಿದರು.



ಕಾರ್ಯಕ್ರಮದಲ್ಲಿ ಎ.ಎಸ್. ಪಾಟೀಲ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎಸ್.ಬಿ. ಕಮಾಟಿ, ಬಿ.ಎಲ್.ಡಿ.ಇ ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎ.ಟಿ. ಶ್ರೀನಿವಾಸ್, 36 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಆಡಳಿತಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಅಜಯ್ ಸಿಂಗ್, ಅಸೋಸಿಯೇಟ್ ಎನ್‌ಸಿಸಿ ಅಧಿಕಾರಿ ಲೆಫ್ಟಿನೆಂಟ್ ಡಾ. ರಾಮಚಂದ್ರ ನಾಯಕ್ ಎಂ. ಸೇರಿದಂತೆ ಎನ್‌ಸಿಸಿ ಅಧಿಕಾರಿಗಳು,ಕಾಲೇಜಿನ

ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ಕೆಡೆಟ್‌ಗಳು ಉಪಸ್ಥಿತರಿದ್ದರು.

ಇದೇ ವೇಳೆ ಕರ್ನಲ್ ವಂಶಿ ಹಾಗೂ ಲೆಫ್ಟಿನೆಂಟ್ ಕರ್ನಲ್ ಅಜಯ್ ಸಿಂಗ್ ಅವರನ್ನು ಸನ್ಮಾನಿಸಲಾಯಿತು.

ನಂತರ ಗಣ್ಯರು ಹಾಗೂ ಎನ್‌ಸಿಸಿ ಅಧಿಕಾರಿಗಳು ಮತ್ತು ಕೆಡೆಟ್‌ಗಳು ಕಾಲೇಜು ಆವರಣದಲ್ಲಿ ಸಸಿಗಳನ್ನು ನೆಟ್ಟು ನೀರುಣಿಸಿದರು.



# ಕೇಂದ್ರ ಸಚಿವರ ಮನೆ ಎದುರು ಪ್ರತಿಭಟನೆ :ಪೂಜಾರಿ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ರೈತರ ಪ್ರಮುಖ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಸೆ. 29ರಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಹುಬ್ಬಳ್ಳಿ ನಿವಾಸದ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕಾಧ್ಯಕ್ಷ ಮಾಳಪ್ಪ ಪೂಜಾರಿ ಹೇಳಿದರು.

ಶನಿವಾರ ನಗರದ ಖಾಸಗಿ ಹೋಟೆಲಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಎಂ.ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಬೇಕು, ಕೃಷಿ ಉತ್ಪನ್ನಗಳಿಗೆ ಕಾನೂನಬದ್ಧ ಕನಿಷ್ಠ ಬೆಂಬಲ ಬೆಲೆ ಖಾತ್ರಿಪಡಿಸಬೇಕು, ಸಕ್ಕರೆಗೆ ಸಾರ್ವಜನಿಕರಿಗೆ ಒಂದು ದರ, ವ್ಯಾಪರಸ್ಥರಾದ ಕೋಕೋ ಕೊಲಾಗಳಂತವರಿಗೆ ಕನಿಷ್ಠ ಪ್ರತಿ ಕೆ.ಜಿ.ಗೆ 100 ಬೆಲೆ ನಿಗದಿ ಮಾಡಬೇಕು, ರೈತರ ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ದೊರೆಯುವಂತೆ ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ರೈತರು ಹೋರಾಟದಲ್ಲಿ ಭಾಗಿಯಾಗಲಿದ್ದು, ಇಂಡಿ ತಾಲೂಕಿಯಿಂದಲೂ ಸಾವಿರಾರು ಜನ ಪಾಲ್ಗೊಳ್ಳುವರು ಎಂದು ತಿಳಿಸಿದರು.

ಎಸ್.ಟಿ.ಪಾಟೀಲ, ವಿವೇಕಾನಂದ ಪೂಜಾರಿ, ಬಸವರಾಜ ಬಪಾಟೀಲ ಮಾತನಾಡಿದರು.

ರೈತ ಮುಖಂಡರಾದ ದತ್ತಾತ್ರೇಯ ಡೋಣಿ, ಸಿದ್ರಾಮಪ್ಪ ವಳಸಂಗ, ಆನಂದಗೌಡ ಬಿರಾದಾರ, ಮಾಂತೇಶ ಬಡಿಗೇರ ಇದ್ದರು.

# ಸೆ.29 ರಂದು ಕೇಂದ್ರ ಸಚಿವ ಜೋಶಿ ಮನೆಗೆ ಮುತ್ತಿಗೆ

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ಪ್ರಸಕ್ತ ವರ್ಷದ ಕಬ್ಬಿಗೆ 5500 ನಿಗದಿ ಮಾಡುವದು, ಎಂ.ಎಸ್.ಪಿ ಜಾರಿಗೊಳಿಸುವದು, 100ರಷ್ಟು ಎತಿಸಾಲ ಖರಿದಿಸುವಂತೆ ಆಗ್ರಹಿಸಿ ರೈತರೊಂದಿಗೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ರೈತ ಸಂಘದ ಗೌರವ ಅಧ್ಯಕ್ಷ ಶಶಿಧರ ನಾಯ್ಕೋಡಿ ಹೇಳಿದರು.

ಶನಿವಾರ ಪಟ್ಟಣದಲ್ಲಿ ರೈತರ ಸಭೆಯ ಬಳಿಕ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಗೌರವ ಅಧ್ಯಕ್ಷ ಶಶಿಕಾಂತ ಗುರೂಜಿ, ರಾಜ್ಯಾಧ್ಯಕ್ಷ ಚುನ್ನಪ್ಪ ಪೂಜಾರಿ ಹಾಗೂ ಮಹಾರಾಷ್ಟ್ರದ ಕಬ್ಬು ಬೆಳಗಾರ ಸಂಘದ ಅಧ್ಯಕ್ಷ ರಾಜು ಶೆಟ್ಟಿ ನೇತೃತ್ವದಲ್ಲಿ ಸಾವಿರಾರು ಸಂಖ್ಯೆ ರೈತರೊಂದಿಗೆ ಇದೆ ತಿಂಗಳು 29ರಂದು ಕೇಂದ್ರ ಸಚಿವ ಪ್ರಹ್ಲಾದ ಜೋಷಿ ಅವರ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ಹಮ್ಮಿಕೊಂಡಿದ್ದು ಈ ಪ್ರತಿಭಟನೆಯಲ್ಲಿ ಆಲಮೇಲ ತಾಲೂಕಿನಿಂದ ಸುಮಾರು ಸಾವಿರಕ್ಕೂ ಹೆಚ್ಚು ರೈತರು ಪಾಲ್ಗೊಳ್ಳಲಿದ್ದಾರೆ ಎಂದರು.



ಪತ್ರಿಕಾಗೋಷ್ಠಿಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಮಾಂತೇಶ ಕತ್ತಿ, ಮಹೇಶ ಹೊನ್ನಳ್ಳಿ, ಇಮ್ರಾನ ಯಲಗಾರ, ರಾಜಕುಮಾರ ಮೇತ್ರಿ, ಬಾಳು ಕುಂಬಾರ, ರಾಮು ಲಾವಟೆ, ಈರಪ್ಪ ಮೇಟಿ, ಶಿವಯೋಗಿ ಕತ್ತಿ, ನಬಿ ಜಮಾದಾರ, ನಿಂಬೋಜಿ ಚೋರಮಲ್ಲ, ಶರಣು ತಳವಾರ, ದೇವಿಂದ್ರ ಮಾಡ್ಯಾಳ, ಪಂಡಿತ ಲಾವಟೆ, ಸೋಮು ಆಸಂಗಿಹಾಳ, ಅಂಬೋಜಿ ಬಂಡಗಾರ, ರಾಜು ಬಿರಾದಾರ ಮುಂತಾದವರು ಇದ್ದರು.

# ಸಚಿವ ಎಂ.ಬಿ.ಪಾಟೀಲ ಜಿಲ್ಲಾ ಪ್ರವಾಸ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರು ಸೆಪ್ಟೆಂ ಬರ್ 27 ರವಿವಾರದಿಂದ ಸೆಪ್ಟೆಂಬರ್ 30 ಬುಧವಾರ ಮಧ್ಯಾಹ್ನದ ವರೆಗೆ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಈ ದಿನಗಳಲ್ಲಿ ಸಚಿವರು ಬೆಳಿಗ್ಗೆ 10 ರಿಂದ ಬೆಳಿಗ್ಗೆ 11 ಗಂಟೆಯವರೆಗೆ ಸಾರ್ವಜನಿಕರ ಅಹವಾಲು ಸ್ವೀಕರಿಸಲಿದ್ದಾರೆ. ನಂತರ ಸ್ಥಳೀಯ ಕಾರ್ಯಕ್ರಮಗಳಲ್ಲಿ ಪಾಲ್ಗೋಳ್ಳಲಿದ್ದಾರೆ ಎಂದು ಸಚಿವರ ಕಚೇರಿಯ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.


ಕರ್ನಾಟಕ ಸರ್ಕಾರ

**ವಲಯ ಅರಣ್ಯ ಅಧಿಕಾರಿಗಳ ಕಛೇರಿ,**
**ವಿಜಯಪುರ ಪ್ರಾದೇಶಿಕ ವಲಯ,**
**ಕೇಂದ್ರಿಯ ವಿದ್ಯಾಲಯ ಹಿಂಭಾಗ, ವಿಜಯಪುರ**

**ದೂರವಾಣಿ:08352-200120, ಇ-ಮೇಲ್:rfobijapur@gmail.com**

ಸಂಖ್ಯೆ: ವಅಅ/ವಿ/ಟ್ರೀ-ಪಾರ್ಕ/ಮಳಿಗೆ/ಜಾ.ಲಿ.ಪ್ರ/2026-27

ದಿನಾಂಕ: 15.09.2026

**ಪತ್ರಿಕಾ ಪ್ರಕಟಣೆ**

ವಿಜಯಪುರ ನಗರದ ಸಾರ್ವಜನಿಕರಿಗೆ/ಆಸಕ್ತರಿಗೆ ಈ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸುವದೇನೆಂದರೆ ವಿಜಯಪುರ ಪ್ರಾದೇಶಿಕ ಅರಣ್ಯ ವಲಯ ವ್ಯಾಪ್ತಿಯಲ್ಲಿ ಬರುವ ಭೂತನಾಳ ಟ್ರೀ ಪಾರ್ಕ ಆವರಣದಲ್ಲಿ ಖಾಲಿ ಇರುವ ಜಾಗದಲ್ಲಿ ಹೊಸ ಕಾಫಿ ಮಳಿಗೆ ನಿರ್ಮಾಣಕ್ಕೆ 10 ವರ್ಷಗಳ ಕಾಲ ಜಾಗದ ಲೀಜವನ್ನು ಟ್ರೀ ಪಾರ್ಕ ನಿರ್ವಹಣಾ ಸಮೀತಿಯ ನಿರ್ಣಯದಂತೆ ಠೇವಣಿ ಹಾಗೂ ಮಾಸಿಕ ಬಾಡಿಗೆ ನಿಗಧಿ ಪಡಿಸಿ ಬಾಡಿಗೆ ದರಕ್ಕೆ ಬಹಿರಂಗ ಹರಾಜುವಿನ ಮುಖಾಂತರ ಮಳಿಗೆ ಜಾಗವನ್ನು ಹಂಚಿಕೆ ಮಾಡಲು ದಿನಾಂಕ: 08.10.2026 ರಂದು ಬೆಳಗ್ಗೆ 11.00 ಘಂಟೆಗೆ ಮಾನ್ಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ, ಪ್ರಾದೇಶಿಕ ಅರಣ್ಯ ಉಪ ವಿಭಾಗ, ವಿಜಯಪುರ, ಕೇಂದ್ರೀಯ ವಿದ್ಯಾಲಯದ ಹಿಂದುಗಡೆ, ಅಫಜಲಪೂರ ಟಕ್ಕೆ, ವಿಜಯಪುರ ಆವರಣದಲ್ಲಿ ಬಹಿರಂಗ ಹರಾಜು ಜರುಗಿಸಲಾಗುವುದು. ಹರಾಜುವಿನಲ್ಲಿ ಭಾಗವಹಿಸಿ ಮಳಿಗೆ ಪಡೆಯಲು ಇಚ್ಚಿಸುವವರು. ದಿನಾಂಕ: 05.10.2026 ರ ಸಾಯಂಕಾಲ 5:30 ಘಂಟೆ ಒಳಗಡೆ ರಾಷ್ಟ್ರೀಕೃತ ಬ್ಯಾಂಕಿನ ರೂ.10,000/- ಗಳ ಪ್ರತ್ಯೇಕ ಠೇವಣಿ ಡಿ.ಡಿ ಅರ್ಜಿಯೊಂದಿಗೆ ಸಲ್ಲಿಸಿದವರಿಗೆ ಮಾತ್ರ ಹರಾಜುವಿನಲ್ಲಿ ಭಾಗವಹಿಸಲು ಅವಕಾಶವಿರುವುದು. ಸದರಿ ಲೀಲಾವು ಮಳಿಗೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಮಾನ್ಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ, ಪ್ರಾದೇಶಿಕ ಅರಣ್ಯ ಉಪ ವಿಭಾಗ, ವಿಜಯಪುರ, ಕಛೇರಿ ನೋಟಿಸ ಬೋರ್ಡಿಗೆ ಪ್ರಚ್ಯೂರ ಪಡಿಸಲಾಗಿದೆ.

ಶರತ್ತುಗಳು:

1) ಟ್ರೀ ಪಾರ್ಕ ನಿರ್ವಹಣಾ ಸಮೀತಿಯ ನಿರ್ಣಯಗಳ ಅನುಗುಣವಾಗಿ ಬಾಡಿಗೆಯನ್ನು ಹೆಚ್ಚಿಸಲಾಗುವುದು ಮತ್ತು ಬಾಡಿಗೆಯನ್ನು ನಿಗಧಿಪಡಿಸುವ ಅಧಿಕಾರವು ನಿರ್ವಹಣಾ ಸಮೀತಿಯ ವ್ಯಾಪ್ತಿಯಲ್ಲಿರುತ್ತದೆ

2) ಸದರಿ ಮಳಿಗೆಯ ಸ್ಥಾಪನೆಯು ಟ್ರೀ ಪಾರ್ಕ ಮೂಲ ಸಂರಚನೆಗೆ ಹಾಗೂ ಕಟ್ಟಡಕ್ಕೆ ಹಾನಿ ಮಾಡುವಂತಿಲ್ಲ. ಹಾನಿಯಾದಲ್ಲಿ ನಿಮ್ಮಿಂದಲೇ ಮೊತ್ತವನ್ನು ಭರಿಸಲಾಗುವುದು.

3) ಹರಾಜುವಿನಲ್ಲಿ ನಿಗಧಿ ಪಡಿಸಿದ ಜಾಗವನ್ನೆ ಬಳಸುವುದು.

4) ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು ಹಾಗೂ ಸ್ವಚ್ಛತೆಯನ್ನು ಕಾಪಡಿಕೊಳ್ಳುವುದು.

5) ಬಾಡಿಗೆಯನ್ನು ಪ್ರತಿ ತಿಂಗಳ 10 ನೇ ತಾರಿಖ ಒಳಗಾಗಿ ಪಾವತಿಸುವುದು

6) ನಿಯಮವನ್ನು ಉಲ್ಲಂಘಿಸಿದಲ್ಲಿ ತತಕ್ಷಣ ಸದಲಿ ಲೀಜ್ ರದ್ದು ಪಡಿಸಲಾಗುವುದು.

**ಸಹಿ/- ವಲಯ ಅರಣ್ಯ ಅಧಿಕಾರಿ, ವಿಜಯಪುರ ವಲಯ, ವಿಜಯಪುರ**

ವಾಸಾಸಂಇ/ವಿಜಯಪುರ/324/ಕೆಎಸ್ಎಂಸಿಎ/2026-27


## ಭಕ್ತಿಆಧ್ಯಾತ್ಮದ ಸಂಗಮದಲ್ಲಿ ಬಾಡಗಿ ಜಾತ್ರಾ ಮಹೋತ್ಸವ । ಇಂಚಗೇರಿ ಮಠದ ಸ.ಸ. ಪ್ರಭುಜಿ ಮಹಾರಾಜ ಕರೆ

# ಸಂತಶರಣರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಿ

■ ಉದಯರಶ್ಮಿ ದಿನಪತ್ರಿಕೆ

ಬಾಗಲಕೋಟೆ (ಜಮಖಂಡಿ): ಬಾಹುಸಾಹೇಬ ಮಹಾರಾಜರ ಹೇಳಿದಂತೆ, ನಾಮ ತೆಗೆದುಕೊಳ್ಳಬೇಕು, ನಿಯಮಗಳನ್ನು ಪಾಲಿಸಬೇಕು. ಸದ್ಗುರುವಿಗೆ ಶರಣಾಗಬೇಕು, ಸದ್ಗುರುವಿನಿಂದ ಉಪದೇಶ ಪಡೆದುಕೊಳ್ಳಬೇಕು ಹಾಗೂ ಸದ್ಗುರುಗಳು ಹೇಳಿದ ಮಾರ್ಗದಲ್ಲಿ ನಡೆಯಬೇಕು. ಎಂದು ಇಂಚಗೇರಿ ಮಠದ ಸ.ಸ. ಪ್ರಭುಜಿ ಮಹಾರಾಜರು ಹೇಳಿದರು.

ಸಮೀಪದ ಬಾಡಗಿ ಗ್ರಾಮದಲ್ಲಿ ಸಿದ್ದಪುರುಷ, ಮಹಾನ್ ಧನ್ವಂತರಿ ಶ್ರೀ ಸ.ಸ. ಚನ್ನಸಂಗಮೇಶ್ವರ ಮಹಾರಾಜರ ಜಾತ್ರಾ ಮಹೋತ್ಸವದ ನಿಮಿತ್ತ ನಡೆದ ಸುವಿಚಾರ ಹಾಗೂ ರಥೋತ್ಸವ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಸಂತಶರಣರು ತಮ್ಮ ಬದುಕಿನ ಮೂಲಕ ಸಮಾಜಕ್ಕೆ ಸನ್ಮಾರ್ಗ ತೋರಿಸಿದ್ದಾರೆ. ಅವರ ವಚನ ಹಾಗೂ ತತ್ವಗಳನ್ನು ಕೇವಲ ಕೇಳುವುದಕ್ಕೆ ಸೀಮಿತಗೊಳಿಸದೆ, ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ರೈತ ಸಂಘದ ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಮಾತನಾಡಿ, ಗುರುಗಳು ತೋರಿಸುವ ಮಾರ್ಗವನ್ನು ನಂಬಿಕೆಯಿಂದ ಅನುಸರಿಸುವುದೇ ನಿಜವಾದ ಶರಣಾಗತಿ ಎಂದರು.



"ರೈತನೆಂದರೆ ಇಡೀ ಸಮಾಜಕ್ಕೆ ಅನ್ನ ನೀಡುವ ಅನ್ನದಾತ. ಬಿಸಿಲು, ಮಳೆ, ಗಾಳಿ ಎನ್ನದೆ ಮಣ್ಣಿನೊಂದಿಗೆ ಬೆವರು ಸುರಿಸಿ ಬೆಳೆ ಬೆಳೆಯುವ ರೈತನ ಬದುಕಿಗೂ ಗೌರವ ನೀಡಿ. ಮಕ್ಕಳ ಭವಿಷ್ಯಕ್ಕೆ ನೌಕರಿಯಷ್ಟೇ ಮುಖ್ಯವಲ್ಲ; ದುಡಿಮೆ, ಸ್ವಾಭಿಮಾನ, ಜವಾಬ್ದಾರಿ ಮತ್ತು ನೆಲದ ನಂಟು ಕೂಡ ಮುಖ್ಯ. ಆದ್ದರಿಂದ ಮನೆಗೆ ಹೆಣ್ಣು ಕೇಳಲು ಬಂದಾಗ, ರೈತನನ್ನೂ ಗೌರವದಿಂದ ಪರಿಗಣಿಸಿ ರೈತನಿಗೆ ಹೆಣ್ಣು ಕೊಡಿ, ರೈತನ ಬದುಕಿಗೆ ಬೆಂಬಲವಾಗಿ ನಿಲ್ಲಿ."

■ **ಶಶಿಕಾಂತ ಗೂರುಜಿ**
ರಾಜ್ಯ ರೈತ ಸಂಘದ ಗೌರವಾಧ್ಯಕ್ಷರು

ಅಥಣಿ ಮಾಜಿ ಶಾಸಕ ಶಹಾಜಾನಂದ ಡೊಂಗರಗಾಂವ ಮಾತನಾಡಿ, 'ಜೈ ಜವಾನ್, ಜೈ ಕಿಸಾನ್' ಎಂಬ ಘೋಷಣೆಯ ಆಶಯದಂತೆ ದೇಶದ ಗಡಿಯಲ್ಲಿ ನಿಂತು ರಾಷ್ಟ್ರವನ್ನು ರಕ್ಷಿಸುತ್ತಿರುವ ಸೈನಿಕರು ಹಾಗೂ ದೇಶದ ಅನ್ನದಾತರಾದ ರೈತರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಶಿಕ್ಷಕ ಬಿ. ಕೆ. ಮುಧೋಳ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಬಾಡಗಿ ಮಠದ ಸಿದಲಿಂಗ ಸಾದು ಮಹಾರಾಜರು, ಚಿಕ್ಕಾಲಗುಂಡಿ ಮಠದ ಶಿವಶರಣಾನಂದ ಸ್ವಾಮೀಜಿ, ಕಕಮರಿ ಮಠದ ಆತ್ಮಾನಂದ ಸ್ವಾಮೀಜಿ, ಮಾಜಿ ಶಾಸಕ ಮಹೇಶ್ ಕುಮಟಳ್ಳಿ, ಬಾಗಲಕೋಟೆ ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಂಟಿ ನಿರ್ದೇಶಕ ಸಿದ್ಧರಾಮೇಶ್ವರ ಉಕ್ಕಲಿ, ಬಾಗಲಕೋಟೆ ಜಿಲ್ಲೆಯ ಉಪ ನಿರ್ದೇಶಕ ಮಲ್ಲನಗೌಡ ಝುರೆ, ಸಿದ್ದು ಹಳ್ಳಿ, ಚನ್ನಪ್ಪ ನ್ಯಾಮಗೌಡ, ವಿಠ್ಠಲ ಮುಧೋಳ, ಗುರಪ್ಪ ನ್ಯಾಮಗೌಡ, ಮಹಾಂತೇಶ ಮಮದಾಪೂರ, ವೈದ್ಯರು, ಸೈನಿಕರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಮಾಜಿ ಹಾಗೂ ಹಾಲಿ ಸೈನಿಕರಿಗೆ ಸನ್ಮಾನ

ದೇಶದ ಗಡಿ ಕಾಯುವ ಮೂಲಕ ರಾಷ್ಟ್ರದ ಭದ್ರತೆಗಾಗಿ ತಮ್ಮ ಜೀವನವನ್ನೇ ಸಮರ್ಪಿಸಿದ ಹಾಲಿ ಹಾಗೂ ಮಾಜಿ ಸೈನಿಕರನ್ನು ಗೌರವಿಸುವ ಸನ್ಮಾನ ಸಮಾರಂಭವು ಜಾತ್ರಾ ಮಹೋತ್ಸವದ ಅಂಗವಾಗಿ ಗೌರವ ಹಾಗೂ ಹೆಮ್ಮೆಯ ವಾತಾವರಣದಲ್ಲಿ ನಡೆಯಿತು.

ದೇಶಸೇವೆ ಸಲ್ಲಿಸುತ್ತಿರುವ ಹಾಗೂ ಸಲ್ಲಿಸಿ ನಿವೃತ್ತರಾದ ವೀರಯೋಧರಿಗೆ ಗೌರವ ಸಲ್ಲಿಸಿ, ಅವರ ತ್ಯಾಗ, ಸೇವೆ ಹಾಗೂ ಸಾಹಸವನ್ನು ಸ್ಮ-ರಿಸಲಾಯಿತು.

## ಕೊನೆ ಭಾಗಕ್ಕೆ ನೀರಿಲ್ಲ । ಪರಿಸ್ಥಿತಿ ಮುಂದುವರಿದರೆ ಉಗ್ರ ಹೋರಾಟದ ಎಚ್ಚರಿಕೆ

# ಚಿಮ್ಮಲಗಿ ಪಶ್ಚಿಮ ಕಾಲುವೆಯಲ್ಲಿ ಅಕ್ರಮ ಪಂಪ್‌ಸೆಟ್ ಹಾವಳಿ

■ ಉದಯರಶ್ಮಿ ದಿನಪತ್ರಿಕೆ

ನಿಡಗುಂದಿ: ಚಿಮ್ಮಲಗಿ ಏತ ನೀರಾವರಿ ಯೋಜನೆಯ ಪಶ್ಚಿಮ ಕಾಲುವೆಯಲ್ಲಿ ಅಕ್ರಮ ಪಂಪ್‌ಸೆಟ್ ಹಾಗೂ ಸೈಫಾನ್ ಪೈಪ್‌ಗಳ ಮೂಲಕ ನೀರು ಎತ್ತಲಾಗುತ್ತಿರುವುದರಿಂದ ಕೊನೆ ಭಾಗದ ಗ್ರಾಮಗಳಿಗೆ ನೀರು ತಲುಪುತ್ತಿಲ್ಲ.

ಕಾಲುವೆಯ ಮೇಲ್ಭಾಗದ ಗ್ರಾಮಗಳಲ್ಲಿ 60ರಿಂದ 80ಕ್ಕೂ ಹೆಚ್ಚು ಅಕ್ರಮ ಪಂಪ್‌ಸೆಟ್‌ಗಳಿವೆ. 53 ಕಿ.ಮೀ. ಉದ್ದದ ಕಾಲುವೆಯ 25-30 ಕಿ.ಮೀ. ವ್ಯಾಪ್ತಿಗೆ ಮಾತ್ರ ನೀರು ತಲುಪುತ್ತಿದ್ದು, ಉಳಿದ ಸುಮಾರು 23 ಕಿ.ಮೀ. ವ್ಯಾಪ್ತಿಯ ನಿಡಗುಂದಿ, ಗೋನಾಳ, ಬೇನಾಳ, ಅಬ್ಬಿಹಾಳ, ಕಿರಿಶ್ಯಾಳ, ಉಣ್ಣಿಭಾವಿ, ಹುಣಶ್ಯಾಳ, ವಂದಾಲ ಗ್ರಾಮಗಳ ರೈತರು ವಂಚಿತರಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಅಕ್ರಮ ಪಂಪ್‌ಸೆಟ್‌ಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ವಶಕ್ಕೆ ಪಡೆದು ಕಾನೂನು ಕ್ರಮ ಕೈಗೊಳ್ಳುವಂತೆ ಕೆಬಿಜೆಎನ್‌ಎಲ್‌ನ ಎಎಲ್‌ಬಿಸಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸೆ.16ರಂದು ಹೆಸ್ಕಾಂ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ಅಕ್ರಮ ಸಂಪರ್ಕಕ್ಕೆ ನಿಡಗುಂದಿ ಮತ್ತು ಮುದ್ದೇಬಿಹಾಳ ಉಪವಿಭಾಗಗಳ ಲೈನ್‌ಮನ್‌ಗಳ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿರುವ ಕೊನೆ ಭಾಗದ ರೈತರಾದ ಗಂಗಾಧರ ವಾರದ, ಮುರಗೇಪ್ಪ ಅವಟಿ, ಪ್ರಕಾಶ ರೇಶ್ಮಿ, ಪಂಡಿತ ರಾಠೋಡ, ಚನ್ನಸಂಗಪ್ಪ ಗೌಡ ಪಾಟೀಲ ಮತ್ತಿತರರು, ಸಂಬಂಧಿಸಿದ ಲೈನ್‌ಮನ್ ಹಾಗೂ ಸೆಕ್ಷನ್ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕೆಂದು ಆಗ್ರಹಿಸಿದ್ದಾರೆ. ಪರಿಸ್ಥಿತಿ ಮುಂದುವರಿದರೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದ್ದಾರೆ.



# ಪಿಕೆಪಿಎಸ್ ಅಧ್ಯಕ್ಷರಾಗಿ ಶ್ರೀಶೈಲ ಕಂಕಣವಾಡಿ

■ ಉದಯರಶ್ಮಿ ದಿನಪತ್ರಿಕೆ





ಜಮಖಂಡಿ: ತಾಲೂಕಿನ ಚಿಕ್ಕಪಡಸಲಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ (ಪಿಕೆಪಿಎಸ್) ನೂತನ ಅಧ್ಯಕ್ಷರಾಗಿ ಶ್ರೀಶೈಲ ಕಂಕಣವಾಡಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಶ್ರೀಶೈಲ ಕಂಕಣವಾಡಿ ಅವರ ಆಯ್ಕೆ ಅವಿರೋಧವಾಗಿ ನಡೆದಿದೆ. ಈ ಮೂಲಕ ಅವರು ಸಂಘದ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ನೂತನ ಅಧ್ಯಕ್ಷರ ಆಯ್ಕೆಯ ಹಿನ್ನೆಲೆಯಲ್ಲಿ ಚಿಕ್ಕಪಡಸಲಗಿ, ಕವಟಗಿ ಹಾಗೂ ನಾಗನೂರ ಗ್ರಾಮದ ಸಂಘದ ಸದಸ್ಯರು, ನಿರ್ದೇಶಕರು ಹಾಗೂ ಸ್ನೇಹಿತರು ಶ್ರೀಶೈಲ ಕಂಕಣವಾಡಿ ಅವರನ್ನು ಅಭಿನಂದಿಸಿ ಶುಭ ಹಾರೈಸಿದರು.

ಸಂಘದ ಅಭಿವೃದ್ಧಿ, ಸದಸ್ಯರ ಹಿತಾಸಕ್ತಿ ಹಾಗೂ ರೈತರಿಗೆ ಅಗತ್ಯ ಸಹಕಾರ ಒದಗಿಸುವ ನಿಟ್ಟಿನಲ್ಲಿ ನೂತನ ಅಧ್ಯಕ್ಷರು ಕಾರ್ಯನಿರ್ವಹಿಸಲಿ ಎಂದು ಎಲ್ಲರೂ ಆಶಿಸಿದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರು, ಸದಸ್ಯರು ಹಾಗೂ ಹಿತೈಷಿಗಳು ಉಪಸ್ಥಿತರಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR